ಪರಿಸರ ಸಂರಕ್ಷಣಾ ಕೇಂದ್ರ
ಜಾಕಿವಂಠ ರಸ್ತೆ, ಶಿರಸಿ – 581 401
ದೂರವಾಣಿ: 25139 (08384)

ದಿನಾಂಕ: 06–06–1998

ಮಾನ್ಯ ಶ್ರೀ

ಮಾನ್ಯರೇ,

ಕಳೆದ ಫೆಬ್ರುವರಿ 20 ಹಾಗೂ 21 ರಂದು ಬಳ್ಳಾರಿಯಲ್ಲಿ ನಡೆದ ಬಯಲು ಸೀಮೆ ಅರಣ್ಯೀಕರಣ ಯೋಜನೆಯ ಕಾರ್ಯಾಗಾರದ ಸಾರಾಂಶಗಳನ್ನು ಕ್ರೋಢೀಕರಿಸಿ ವರದಿ ಸಿದ್ಧವಾಗಿದೆ. ಪುಸ್ತಕ ರೂಪದಲ್ಲಿ ಇದನ್ನು ಈಗ ತಮಗೆ ತಲುಪಿಸುತ್ತಿದ್ದೇವೆ. ಕಾರ್ಯಾಗಾರದಲ್ಲಿ ಪಾಲ್ಗೊಂಡು ಮಹತ್ವದ ವಿಚಾರಗಳನ್ನು ತಿಳಿಸಿದ ತಮಗೆಲ್ಲರಿಗೂ ಕೃತಜ್ಞತೆಗಳು.

ವರದಿಯ ಮುದ್ರಣ ವೆಚ್ಚವನ್ನು ಪುಸ್ತಕ ಮಾರಾಟದಿಂದ ಬರಿಸಬೇಕಾಗಿದೆ. ಈ ಪುಸ್ತಕಕ್ಕೆ ಬೆಲೆ ರೂ. 80–00 ( ಎಂಬತ್ತು ರೂಪಾಯಿಗಳು ಮಾತ್ರ) ಎಂದು ನಿಗದಿಪಡಿಸಲಾಗಿದೆ. ಪುಸ್ತಕ ತಲುಪಿದ ತಕ್ಷಣ ಹಣವನ್ನು '' ಪರಿಸರ ಸಂರಕ್ಷಣಾ ಕೇಂದ್ರ – ಶಿರಸಿ'' ಹೆಸರಿಗೆ ಡಿ.ಡಿ. ಮುಖೇನ ಕಳಿಸಬೇಕಾಗಿ ವಿನಂತಿ.

ವಂದನೆಗಳೊಂದಿಗೆ,

ತಮ್ಮವ,

( ಪಾಂಡುರಂಗ ಹೆಗಡೆ )

# ಪೂರ್ವ ಬಯಲು ಸೀಮೆಯ ಅರಣ್ಯೀಕರಣ ಹಾಗೂ ಪರಿಸರ ಯೋಜನೆ

## ಕಾರ್ಯಗಾರದ ವರದಿ

ದಿನಾಂಕ ೨೦ ಹಾಗೂ ೨೧ ಫೆಬ್ರುವರಿ, ೧೯೯೮ ರಂದು
ಸ್ಥಳಃ ಚಿಗಟೇರಿ (ಹರಪನಹಳ್ಳಿ ತಾ। ಬಳ್ಳಾರಿ ಜಿಲ್ಲೆ)

ವರದಿ ಸಂಗ್ರಹ : ಶಿವಾನಂದ ಕಳವೆ
ಸಹಕಾರ : ಪಾಂಡುರಂಗ ಹೆಗಡೆ,
ಲೋಕೇಶ ಗೌಡ

ಪ್ರಕಾಶಕರು :
ರಾಜ್ಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ, ಬೆಂಗಳೂರು
ಸಮಾಜ ಪರಿವರ್ತನ ಸಮುದಾಯ, ಧಾರವಾಡ.
ಪರಿಸರ ಸಂರಕ್ಷಣಾ ಕೇಂದ್ರ, ಶಿರಸಿ.
ಸೇವಾ ಸಂಗಮ ಬಳ್ಳಾರಿ.

ಬೆಲೆ ರೂ. ೪೦.- ಮಾತ್ರ

# ಪರಿವಿಡಿ


| ಅ.ಸಂ. | ವಿಷಯ | ಪುಟ ಸಂ. |
|---|---|---|
| ೧. | ಅರಿಕೆ | ೧ |
| ೨. | ಪ್ರಕಾಶಕರ ಮಾತು | ೨,೩ |
| ೩. | ಕಾರ್ಯಗಾರದ ಕಾರ್ಯಕ್ರಮ ವಿವರ | ೪,೫ |
| ೪. | ಅರಣ್ಯ ಇಲಾಖೆ ವರ್ತನೆಯಲ್ಲಿ ದೊಡ್ಡ ಜಮೀನ್ದಾರರಂತೆ - ಎಸ್. ಆರ. ಹಿರೇಮಠ | ೬ |
| ೫. | ವಿಫಲವಾದ ಪಶ್ಚಿಮ ಘಟ್ಟದ ಯೋಜನೆ -ಪಾಂಡುರಂಗ ಹೆಗಡೆ | ೭ |
| ೬. | ಉತ್ತರ ಕನ್ನಡದಲ್ಲಿ ಜನರ ಸಹಭಾಗಿತ್ವದ ಯೋಜನೆ - ಸುದರ್ಶನ ಮಳಗಿ | ೮ |
| ೭. | ನಲ್ಲೂರಿನ ಕಾಡಿನ ಧ್ವಂಸಕ್ಕೆ ಎಂ.ಪಿ.ಎಂ ಬುಲ್ಡೋಜರ್ -ಮಹೇಂದ್ರಕುಮಾರ್ | ೯ |
| ೮. | ಹಸಿರು ಸಾಲದ ಯೋಜನೆ - ಶಿವಾನಂದ ಕಳವೆ | ೧೦,೧೧ |
| ೯. | ಯೋಜನೆ ಉದ್ದೇಶ ಎಷ್ಟರಮಟ್ಟಿಗೆ ಜನರ ಉದ್ದೇಶವಾಗಿದೆ - ಗುರುರಾಜ ಬುಧ್ಯ | ೧೨ |
| ೧೧. | ಕಾರ್ಯಗಾರದ ನಿರೀಕ್ಷೆಗಳ ಕ್ರೋಢೀಕರಣ | ೧೩ |
| ೧೨ | ಸಂಗ್ರಹಿತ ನಿರೀಕ್ಷೆಗಳ ಪರಿಷ್ಕರಣೆ | ೧೪ |
| ೧೩ | ಗುಂಪುಗಳ ಫಲಶ್ರುತಿ | ೧೫,೧೬ |
| ೧೪ | ಕಾಡು ಬೆಳಸಾಕ ಹಣಾ ಬೇಕೇನ್ರಿ - ಸಂಗಪ್ಪ ಉಪ್ಪಲದಿನ್ನಿ | ೧೭ |
| ೧೫ | ಕಾರ್ಯಗಾರದ ಠರಾವುಗಳು. | ೧೮,೨೦ |
| ೧೬ | ಅನುಭಂದ - ೧ ಕಾರ್ಯಗಾರದ ನಿರೀಕ್ಷೆಗಳು | ೨೧,೨೨ |
| ೧೭ | ಅನುಭಂದ - ೨ ಗುಂಪು ಚರ್ಚೆ (೧ ರಿಂದ ೫ ಗುಂಪುಗಳು) | ೨೩,೩೩ |
| ೧೮ | ಅನುಭಂದ - ೩ ಕಾರ್ಯಯೋಜನೆ (ಜಿಲ್ಲಾ ವಿವರಗಳು) | ೩೪,೩೭ |
| ೧೯ | ಅನುಭಂದ - ೪ ಕಾರ್ಯಕ್ರಮ ಆಮಂತ್ರಣ | ೪೦,೪೯ |
| ೨೦ | ಅನುಭಂದ - ೫ ಪ್ರತಿನಿಧಿಗಳ ವಿಳಾಸಗಳು | ೫೦,೫೯ |

## ಅರಿಕೆ......

ಕರ್ನಾಟಕದ ಬಯಲು ಸೀಮೆಗಳಲ್ಲಿ ಗಿಡ ಮರ ಬೆಳೆಸಲು ೫೬೬.೫೫ ಕೋಟಿ ರೂಪಾಯಿ ವೆಚ್ಚದ ಭಾರೀ ಯೋಜನೆ ಈಗ ಜಾರಿಯಾಗಿದೆ. ರಾಜ್ಯದ ೧೭ ಜಿಲ್ಲೆಗಳ ೧೩೪ ತಾಲ್ಲೂಕುಗಳ ೪.೨೦.೫೦೦ ಹೆಕ್ಟೇರ್ ಪ್ರದೇಶದಲ್ಲಿ ಕಾರ್ಯಗತವಾಗಲಿರುವ ಯೋಜನೆಯನ್ನು 'ಪೂರ್ವ ವಲಯ ಅರಣ್ಯ ಹಾಗೂ ಪರಿಸರ ಯೋಜನೆ' ಎಂದು ಕರೆಯಲಾಗಿದೆ. ಜಪಾನಿನ ಸಾಗರೋತ್ತರ ಸಹಕಾರ ನಿಧಿಯ ಸಾಲದ ಹಣದಿಂದ ಇದು ಜಾರಿಯಾಗಲಿದೆ. ನಮ್ಮ ಬಯಲುಸೀಮೆಗೆ ಇತಿಹಾಸದಲ್ಲೆ ಮೊದಲಬಾರಿಗೆ ಇಂತಹ ವ್ಯಾಪಕ ಅರಣ್ಯೀಕರಣ ಸಿದ್ಧತೆ ನಡೆದಿದೆ.

ಕರ್ನಾಟಕ ಅರಣ್ಯ ಇಲಾಖೆಯ ನೇತೃತ್ವದಲ್ಲಿ ಜಾರಿಯಾಗಲಿರುವ ಈ ಭಾರೀ ಯೋಜನೆಯ ಬಗೆಗೆ ಜನಸಾಮಾನ್ಯರಿಗೆ, ಸ್ವಯಂ ಸೇವಾ ಸಂಸ್ಥೆಗಳಿಗೆ ಅರಿವು ಮೂಡಿಸಬೇಕು. ಇಷ್ಟು ದೊಡ್ಡ ಪ್ರಮಾಣದಲ್ಲಿ ಹಣ ಖರ್ಚು ಮಾಡುವ ಯೋಜನೆಯಿಂದ ಜನರ ಹಾಗೂ ಪರಿಸರದ ಮೇಲೆ ಯಾವ ರೀತಿಯ ಪರಿಣಾಮಗಳಾಗಬಹುದು? ಈ ಯೋಜನೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಹೇಗೆ ಭಾಗವಹಿಸಬಹುದು? ಎಂಬದನ್ನು ತಿಳಿಯಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ ಹರಪನಹಳ್ಳಿ ಸನಿಹದ ಚಿಗಟೇರಿಯಲ್ಲಿ ಫೆಬ್ರುವರಿ ೨೦-೨೧ರಂದು ಎರಡು ದಿನಗಳ ಕಾರ್ಯಾಗಾರ ಏರ್ಪಡಿಸಿತ್ತು. ವಿಶೇಷವಾಗಿ ಯೋಜನೆ ಜಾರಿಯಾಗಲಿರುವ ಪ್ರದೇಶಗಳಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳನ್ನು ಕಾರ್ಯಾಗಾರಕ್ಕೆ ಆಹ್ವಾನಿಸಲಾಗಿತ್ತು. ಗ್ರಾಮ, ತಾಲೂಕು ಹಾಗೂ ಜಿಲ್ಲಾ, ರಾಜ್ಯಮಟ್ಟಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಣ್ಣ, ದೊಡ್ಡ ಸಂಸ್ಥೆಗಳ ಅರವತ್ತೈದು ಜನ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಕೆಲವು ಹಳ್ಳಿಗರೂ ಆಗಮಿಸಿದ್ದರು. ರಾಜ್ಯದ ವಿವಿಧ ಪ್ರದೇಶಗಳಿಂದ ಆಗಮಿಸಿದ ಪ್ರತಿನಿಧಿಗಳು ಅರಣ್ಯಾಭಿವೃದ್ಧಿ ಪ್ರಕ್ರಿಯೆಗಳಲ್ಲಿನ ತಮ್ಮ ಅನುಭವಗಳನ್ನು ಮುಕ್ತವಾಗಿ ಹಂಚಿಕೊಂಡರು. ಬಯಲುಸೀಮೆ ಅರಣ್ಯೀಕರಣದ ಬೃಹತ್ ಯೋಜನೆಯ ಸಾಧಕ-ಬಾಧಕಗಳನ್ನು ಕೂಲಂಕಶವಾಗಿ ಚರ್ಚಿಸಿದರು.

ಕರ್ನಾಟಕದ ಸಾಮಾಜಿಕ ಅರಣ್ಯ ಯೋಜನೆ, ಪಶ್ಚಿಮಘಟ್ಟ ಅರಣ್ಯಾಭಿವೃದ್ಧಿ ಯೋಜನೆಗಳಲ್ಲಿನ ಅಭಿವೃದ್ಧಿಯ ಆಗು ಹೋಗುಗಳ ಅನುಭವ, ರಾಷ್ಟ್ರೀಯ ಅರಣ್ಯ ನೀತಿಯ ಪಾಲನೆ, ಜನ ಸಹಭಾಗಿತ್ವದ ಅರಣ್ಯಾಭಿವೃದ್ಧಿ, ಭೂಮಿಗೆ ಜನಜೀವನಕ್ಕೆ ಬೇಕಾದ ಸುಸ್ಥಿರ ಅರಣ್ಯಾಭಿವೃದ್ಧಿ ಹೀಗೆ ವಿವಿಧ ಆಯಾಮಗಳಲ್ಲಿ ಕಾರ್ಯಾಗಾರ ಬಯಲುಸೀಮೆಯ ಅರಣ್ಯ ಯೋಜನೆಯನ್ನು ತೂಗಿ ನೋಡುವ ಪ್ರಯತ್ನ ಮಾಡಿತು. ಇಡೀ ಯೋಜನೆಯ ಬಗ್ಗೆ ದೋಷಗಳೇ ವಿಶೇಷವಾಗಿ ವ್ಯಕ್ತವಾದವು. ದೋಷಗಳನ್ನೇ ದೃಢಪಡಿಸಬಲ್ಲ ಪುರಾವೆಗಳೇ ಹೆಚ್ಚಾಗಿ ಕಾರ್ಯಾಗಾರದಲ್ಲಿ ಕಾಣಿಸಿಕೊಂಡಿದ್ದಕ್ಕೆ ಕಾರಣ ಯೋಜನೆ ಜನಪರವಾಗಿರದಿದ್ದದು ಎಂದು ಬೇರೆ ಹೇಳಬೇಕಾಗಿಲ್ಲ.

ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಗಳು, ಪ್ರತಿನಿಧಿಗಳ ವಿವಿಧ ಗುಂಪುಗಳು ತೋಡಿಕೊಂಡ ಹಲವು ವಿಚಾರಗಳು ಮುಂದಿವೆ. ವರದಿಸಂಗ್ರಹ, ನಿರೂಪಣೆಗಳಲ್ಲಿ ಸಹಕರಿಸಿದ ಶ್ರೀ ಲೋಕೇಶ್ ಗೌಡ, ಶ್ರೀ ಪಾಂಡುರಂಗ ಹೆಗಡೆ, ಶ್ರೀ ಸುದರ್ಶನ್ ಮಳಗಿ ಇವರಿಗೆಲ್ಲ ಕೃತಜ್ಞತೆಗಳು.

ದಿನಾಂಕ :- ೧೦ ಮಾರ್ಚ್ ೯೮

ಶಿವಾನಂದ ಕಳವೆ

# ಪ್ರಕಾಶಕರ ಮಾತು

ಪೂರ್ವ ವಲಯದ ಬಯಲು ಸೀಮೆಯಲ್ಲಿ ಅರಣ್ಯ ಬೆಳೆಸುವ ಉದ್ದೇಶದಿಂದ ಜಪಾನ್ ದೇಶವು ರೂ **565/-** ಕೋಟಿ ಹಣ ನೀಡಿದೆ . ಈ ಯೋಜನೆಯನ್ನು ಈಗಾಗಲೇ ಬಯಲು ಸೀಮೆಯ ಹಲವಾರು ಜಿಲ್ಲೆಗಳಲ್ಲಿ ಜಾರಿಗೊಳಸಿಲಾಗಿದೆ.

ಕರ್ನಾಟಕದ ಅರಣ್ಯೀಕರಣದ ಇತಿಹಾಸದಲ್ಲಿಯೆ ಇಷ್ಟು ದೊಡ್ಡ ಯೋಜನೆ ಜಾರಿಗೊಳ್ಳುಸುತ್ತಿರುವದು ಒಂದು ವಿಶೇಷವಾಗಿದೆ. ಈ ಯೋಜನೆಯ ವಿವರಗಳೇನು? ಇದನ್ನು ಆಂಗ್ಲ ಭಾಷೆಯ ಯೋಜನಾ ವರದಿಯಿಂದ ಕನ್ನಡಕ್ಕೆ ಅನುವಾದಿಸಿ ಸಾಮನ್ಯ ಜನರಿಗೂ ತಿಳಿಯುವಂತೆ ಪರಿಸರ ಸಂರಕ್ಷಣಾ ಕೇಂದ್ರವು ಮಾಡಿದೆ.

ಕನ್ನಡದ ಯೋಜನಾ ಸಾರಂಶವನ್ನು ಸ್ವಯಂ ಸೇವಾ ಸಂಸ್ಥೆಗಳಿಗೆ ಮುಂಚಿತವಾಗಿ ಓದಲು ಕಳುಹಿಸಿದ ನಂತರ ದಿ ೨೦ ಹಾಗೂ ೨೧ ಫೆಬ್ರುವರಿ ೧೯೯೮ ರಂದು ಬಳ್ಳಾರಿಯಲ್ಲಿ ಈ ಕುರಿತು ಚರ್ಚಿಸಲು ಕಾರ್ಯಗಾರ ವನ್ನು ಏರ್ಪಡಿಸಲಾಗಿತ್ತು.

ರಾಜ್ಯದ ವಿವಿಧ ಭಾಗಗಳಿಂದ ಬಂದು ಭಾಗವಹಿಸಿ ಈ ಯೋಜನೆಯ ಬಗ್ಗೆ ವಿಶ್ಲೇಷಣೆ ಮಾಡಿರುವ ಅಂಶಗಳನ್ನು ಈ ವರದಿಯಲ್ಲಿ ನೀಡಲು ನಾವು ಪ್ರಯತ್ನಿಸಿದ್ದೇವೆ. ಆದುದರಿಂದ ಈ ವರದಿಯಲ್ಲಿನ ಅಂಶಗಳು ನೀವು ವ್ಯಕ್ತಪಡಿಸಿದ ವಿಚಾರಗಳ, ನೀವು ಚರ್ಚಿಸಿದ ವಿಷಯಗಳ ಹಾಗೂ ನೀವು ಯೋಜಿಸಿದ ಕಾರ್ಯಯೋಜನೆಯ ಸಾರಾಂಶವಾಗಿದೆ.

ಈ ಮಹತ್ವದ ಕಾರ್ಯಗಾರದ ವರದಿಗಿಂತ ಹೆಚ್ಚಾಗಿ ಇದೊಂದು ಐತಿಹಾಸಿಕ ದಾಖಲೆ ಎಂಬುದು ನಮ್ಮ ಅನಿಸಿಕೆ. ಸಾಮಾನ್ಯ ಜನ ಜೀವನದ ಮೇಲೆ ಗಂಭೀರವಾಗಿ ಪರಿಣಾಮ ಬೀರಬಲ್ಲ ಈ ಯೋಜನೆಯ ಬಗ್ಗೆ ಜನರ ಸ್ವಯಂ ಸೇವಾ ಸಂಸ್ಥೆಗಳ ವಿಚಾರದ ಆಮೂಲಾಗ್ರ ದಾಖಲಾತಿಯ ಈ ವರದಿ.

ಶಿವಾನಂದ ಕಳವೆ,

ಲೊಕೇಶ ಗೌಡ, ಸ. ಪ. ಸ. ಧಾರವಾಡ

ಪಾಂಡುರಂಗ ಹೆಗಡೆ , ಸಿರ್ಸಿ

## ವಿಷಯ : ಪೂರ್ವ ಬಯಲು ಸೀಮೆಯಲ್ಲಿ ಅರಣ್ಯೀಕರಣ ಹಾಗೂ ಪರಿಸರ ಯೋಜನೆಯ ಕುರಿತು

( ಈ ಯೋಜನೆಯ ಕನ್ನಡ ಅನುವಾದದ ಪ್ರತಿಯನ್ನು ಶೀಘ್ರದಲ್ಲೇ ಕಳುಹಿಸಲಾಗುವುದು)

*ಗೆಳೆಯರೇ,*

ಕರ್ನಾಟಕದ ಬಯಲು ಪ್ರದೇಶಗಳಲ್ಲಿ ಗಿಡ ಬೆಳೆಸುವ ಉದ್ದೇಶದಿಂದ ಜಪಾನ್ ದೇಶವು ೫೬೫ ಕೋಟಿ ರೂಪಾಯಿಯ ಸಹಾಯಧನವನ್ನು ಸಾಲವಾಗಿ ನೀಡಿದೆ. ಏಳು ವರ್ಷಗಳ ಈ ಯೋಜನೆಯನ್ನು ೧೭ ಜಿಲ್ಲೆಗಳಲ್ಲಿ ಹಾಗೂ ೧೩೮ ತಾಲ್ಲೂಕಿನಲ್ಲಿ ಕಾರ್ಯಗತಗೊಳಿಸಲಾಗುವುದು.

ಇಷ್ಟು ದೊಡ್ಡ ಪ್ರಮಾಣದಲ್ಲಿ ಹಣವನ್ನು ಖರ್ಚುಮಾಡುವ ಈ ಯೋಜನೆಯಿಂದ ಜನರ ಹಾಗೂ ಪರಿಸರದ ಮೇಲೆ ಯಾವ ರೀತಿಯ ಪರಿಣಾಮ ಉಂಟಾಗಬಹುದು? ಈ ಯೋಜನೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಹೇಗೆ ಭಾಗವಹಿಸಬಹುದು? ಹಾಗೂ ಈ ಯೋಜನೆಯ ಸಾಧಕ – ಭಾದಕಗಳು ಕುರಿತು ಸುಧೀರ್ಘವಾಗಿ ಚರ್ಚಿಸಲು ಎರಡು ದಿನದ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ.
ವಿವರ ಈ ಕೆಳಗಿನಂತಿವೆ.

ಸ್ಥಳ: ರೇಣುಕಾ ಕಲ್ಯಾಣ ಮಂಟಪ, ಚಿಗಟೇರಿ,(ಹರಪನಹಳ್ಳಿಯಿಂದ ೧೫ ಕಿ.ಮೀ
ಸಂಪರ್ಕ: ಮಲ್ಲೇಶ ರೀಚ್ ಸಂಸ್ಥೆ, ದೂರವಾಣಿ: 08398 - 70845
ಹಾಗೂ ಹರಪನಹಳ್ಳಿಯಲ್ಲಿ ಸಂಪರ್ಕ ಸಂಜೀವಯ್ಯ, ಸೀಡ್ಸ್,
ದೂರವಾಣಿ: 08398 –72777)
ದಿನಾಂಕ: ಫೆಬ್ರುವರಿ ೨೦ ಹಾಗೂ ೨೧ -೨- ೧೯೯೮ (ಶುಕ್ರವಾರ ಹಾಗೂ ಶನಿವಾರ)

ಈ ಯೋಜನೆಯು ತಾವು ಕೆಲಸ ಮಾಡುತ್ತಿರುವ ಕ್ಷೇತ್ರದಲ್ಲಿ ಕಾರ್ಯಗತವಾಗುತ್ತಲಿವೆ. ಈ ಬಗ್ಗೆ ಲಭ್ಯವಾದ ಮಾಹಿತಿಯನ್ನು ಸಂಗ್ರಹಿಸಿಕೊಂಡು ಬಂದಲ್ಲಿ ಚರ್ಚೆಗೆ ಅನುಕೂಲವಾಗುತ್ತದೆ. ಈ ಕಾರ್ಯಗಾರಕ್ಕೆ ಈ ಯೋಜನೆಯಲ್ಲಿ ನಮೂದಿಸಿರುವ ಜಿಲ್ಲೆಯಲ್ಲಿನ ಎಲ್ಲ ಸ್ವಯಂ ಸೇವಾ ಸಂಸ್ಥೆಗಳನ್ನು ಭಾಗವಹಿಸಲು ಕೇಳಿಕೊಳ್ಳಲಾಗಿದೆ. ಇದಲ್ಲದೇ ನಿಮಗೆ ತಿಳಿದಿರುವ ಇತರ ಸಂಸ್ಥೆಗಳ ಅಥವಾ ಆಸಕ್ತಿಯುಳ್ಳ ವ್ಯಕ್ತಿಗಳನ್ನು ಕರೆದು ತನ್ನಿ. ಕಾರ್ಯಕ್ರಮದ ಅವಧಿಯಲ್ಲಿ ವಸತಿ ಹಾಗೂ ಊಟದ ವ್ಯವಸ್ಥೆಯನ್ನು ಮಾಡಲಾಗುವುದು. ಬರುವಾಗ ನಿಮ್ಮ ಹೊದಿಕೆಯನ್ನು ತೆಗೆದುಕೊಂಡು ಬನ್ನಿ.

ನೀವು ಬರುವುದನ್ನು ಖಚಿತಪಡಿಸಿ ಒಂದು ಪೋಸ್ಟ್‌ಕಾರ್ಡನಲ್ಲಿ ಜಿ.ಎನ್. ಸಿಂಹ, ರೀಚ್ ಸಂಸ್ಥೆ ಕುಮಾರನಹಳ್ಳಿ, ಅಂಚೆ ಅಡವಿಹಳ್ಳಿ, ಹರಪನಹಳ್ಳಿ ತಾಲ್ಲೂಕು - ೫೮೩೧೩೧. ಬಳ್ಳಾರಿ ಜಿಲ್ಲೆ,ಈ ವಿಳಾಸಕ್ಕೆ ತಿಳಸಿದ್ದಲ್ಲಿ ವ್ಯವಸ್ಥೆ ಮಾಡಲು ಸಹಾಯಕವಾಗುತ್ತದೆ.

ಈ ಕಾರ್ಯಗಾರವನ್ನು ಸ್ವಯಂ ಸೇವಾ ಸಂಸ್ಥೆಗಳೇ ಏರ್ಪಡಿಸಿರುವದರಿಂದ ಪ್ರಯಾಣದ ಖರ್ಚನ್ನು ತಮ್ಮ ಸಂಸ್ಥೆಯೇ ಭರಿಸಬೇಕಾಗುತ್ತದೆ. ಅನಿವಾರ್ಯ ಕಾರಣಗಳಿಂದ ತೊಂದರೆ ಇದ್ದಲ್ಲಿ ಈ ಕೆಳಗಿನ ವಿಳಾಸಕ್ಕೆ ಮುಂಚಿತವಾಗಿ ತಿಳಿಸಿದ್ದಲ್ಲಿ ಪ್ರಯಾಣದ ಖರ್ಚನ್ನು ಭರಿಸಲು ಪ್ರಯತ್ನ ಮಾಡಲಾಗುವುದು.

ಎಸ್. ಆರ್. ಹಿರೇಮಠ
ಗುರುರಾಜ ಬುಧ್ಯ
ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ
ಬೆಂಗಳೂರು

ಪಾಂಡುರಂಗ ಹೆಗಡೆ
ಶಿರಸಿ

ಜಿ. ಎನ್. ಸಿಂಹ
ಪಿ. ಎಚ್. ನಾಯ್ಡು / ಸಂಜೀವಯ್ಯ
ಸೇವಾ ಸಂಗಮ
ಬಳ್ಳಾರಿ

# ಕಾರ್ಯಾಗಾರದ ಕಾರ್ಯಕ್ರಮ ವಿವರ

ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಯಿಂದ ೧೫ ಕಿ. ಮೀ. ದೂರದ ಚಿಗಟೇರಿ ಹಳ್ಳಿಯ ರೇಣುಕಾ ಕಲ್ಯಾಣ ಮಂಟಪದಲ್ಲಿ ಬಯಲುಸೀಮೆಯ ಅರಣ್ಯೀಕರಣ ಯೋಜನೆಯ ಬಗ್ಗೆ ಕಾರ್ಯಾಗಾರ ಏರ್ಪಾಟಾಗಿತ್ತು. ಕರ್ನಾಟಕ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ. ಬಳ್ಳಾರಿಯ ಸೇವಾ ಸಂಗಮ ಹಾಗೂ ಶಿರಸಿಯ ಪರಿಸರ ಸಂರಕ್ಷಣಾ ಕೇಂದ್ರ, ಧಾರವಾಡದ ಸಮಾಜ ಪರಿವರ್ತನ ಸಮುದಾಯ ಮತ್ತು ಬಳ್ಳಾರಿಯ ರೀಚ್, ಸೀಡ್ ಮೊದಲಾದ ಸ್ವಯಂ ಸೇವಾ ಸಂಸ್ಥೆಗಳು ಕಾರ್ಯಾಗಾರವನ್ನು ವ್ಯವಸ್ಥೆಗೊಳಿಸಿದ್ದವು. ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅರವತ್ತಕ್ಕೂ ಹೆಚ್ಚು ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಉತ್ಸಾಹದಿಂದ ಪಾಲ್ಗೊಂಡಿದ್ದರು. ಕಾರ್ಯಾಗಾರ ಆರಂಭ ಫೆಬ್ರುವರಿ ೨೦ರಿಂದಾದರೂ ಕೆಲವು ಪ್ರತಿನಿಧಿಗಳು ೧೯ರ ಸಾಯಂಕಾಲವೇ ಮುಂಚಿತವಾಗಿ ಆಗಮಿಸಿದ್ದರು. ಫೆಬ್ರುವರಿ ೨೦ರ ಬೆಳಿಗ್ಗೆ ಶಿಬಿರಾರ್ಥಿಗಳ ನೋಂದಣಿ ಕಾರ್ಯ ಆರಂಭವಾಯಿತು. ಕೆಲವು ಪ್ರತಿನಿಧಿಗಳು ದೂರದ ಊರುಗಳಿಂದ ಆಗಮಿಸುತ್ತಲೇ ಇದ್ದರು. ಬೆಳಿಗ್ಗೆ ೧೦-೩೦ಕ್ಕೆ ಕಾರ್ಯಾಗಾರದ ಸ್ವರೂಪದ ಬಗ್ಗೆ ಅನೌಪಚಾರಿಕ ಮಾತುಕತೆ ನಡೆದಿತ್ತು. ಎಲ್ಲರೂ ಸಭೆ ಸೇರಿದರು. ಫೆವಾರ್ಡ್ ಕೆ.ಯ ಶ್ರೀ ಎಸ್. ಆರ್. ಹಿರೇಮಠ ಎಲ್ಲರನ್ನೂ ಕಾರ್ಯಾಗಾರಕ್ಕೆ ಆದರದಿಂದ ಸ್ವಾಗತಿಸಿದರು. ಶಿಬಿರದ ಸ್ಥಳೀಯ ಸಂಘಟಕರಲ್ಲೊಬ್ಬರಾದ ಶ್ರೀ ಸಂಜೀವಯ್ಯ ಸೇವಾ ಸಂಗಮದ ಪರಿಚಯ ಮಾಡಿದರು. ಬಳ್ಳಾರಿ ಜಿಲ್ಲೆಯ ೧೬ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟವಾಗಿ ಸೇವಾಸಂಗಮ ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿಸಿದರು. ಹಾಜರಿದ್ದ ಪ್ರತಿನಿಧಿಗಳು ಸಭೆಗೆ ತಮ್ಮನ್ನು ಪರಿಚಯಿಸಿಕೊಂಡರು.

ಕಾರ್ಯಾಗಾರದಲ್ಲಿ ನಡೆಸಬೇಕಾದ ಕಾರ್ಯಕ್ರಮದ ಪಟ್ಟಿಯನ್ನು ಆಗಲೇ ಶಿರಸಿಯ ಪರಿಸರ ಸಂರಕ್ಷಣಾ ಕೇಂದ್ರದ ಶ್ರೀ ಪಾಂಡುರಂಗ ಹೆಗಡೆ ಸಿದ್ಧಪಡಿಸಿದ್ದರು. ಈ ಪಟ್ಟಿಯನ್ನು ಸಭೆಯೆದುರು ಇಡಲಾಯಿತು. ಸೂಕ್ತ ತಿದ್ದುಪಡಿಯ ಬಗ್ಗೆ ಸೂಚಿಸಲು ಪ್ರತಿನಿಧಿಗಳಲ್ಲಿ ವಿನಂತಿಸಲಾಯಿತು. ಹೀಗೆ ಸಿದ್ಧವಾದ ಪರಿಷ್ಕೃತ ಕಾರ್ಯಕ್ರಮ ಪಟ್ಟಿಯಂತೆ ಕಾರ್ಯಕ್ರಮ ನಡೆಸುವುದೆಂದು ಸರ್ವಾನುಮತದ ತೀರ್ಮಾನವಾಯಿತು. ಶ್ರೀ ಎಸ್. ಆರ್. ಹಿರೇಮಠ ಮುಂದಿನ ಎರಡು ದಿನಗಳ ಕಾಲ ನಡೆಯಬೇಕಾದ ಕಾರ್ಯಗಳನ್ನು ಸಭೆಗೆ ವಿವರಿಸಿದರು.

ರೂಪಿತ ಕಾರ್ಯಕ್ರಮದ ಅನ್ವಯ ಕಾರ್ಯಾಗಾರದ ಮೊದಲ ದಿನದ ಕಾರ್ಯಕ್ರಮ ಸ್ವರೂಪ ಹೀಗಿತ್ತು. ಶ್ರೀ ಎಸ್. ಆರ್. ಹಿರೇಮಠರು ಕರ್ನಾಟಕ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ(ಫೆವಾರ್ಡ್ ಕೆ.)ದ ಪರಿಚಯದ ಜೊತೆಗೆ ಕರ್ನಾಟಕದಲ್ಲಿ ಈ ಹಿಂದೆ (೧೯೮೩-೮೮) ಜಾರಿಯಾಗಿದ್ದ ಸಾಮಾಜಿಕ ಅರಣ್ಯ ಯೋಜನೆ ಹಾಗೂ ಅದರ ಪರಿಣಾಮಗಳ ಬಗ್ಗೆ ವಿವರಿಸಿದರು. ಪಶ್ಚಿಮಘಟ್ಟ ಅರಣ್ಯಾಭಿವೃದ್ಧಿ (೧೯೯೩-೯೮) ಯೋಜನೆ ಹಾಗೂ ಈ ಯೋಜನೆಯ ಅಧ್ಯಯನ ನಡೆಸಿದ ಎನ್. ಸಿ. ಸಕ್ಸೇನಾ ವರದಿಯ ಬಗ್ಗೆ ಶ್ರೀ ಪಾಂಡುರಂಗ ಹೆಗಡೆ ಉಪನ್ಯಾಸ ನೀಡಿದರು. ಉತ್ತರ ಕನ್ನಡದಲ್ಲಿ ಕಳೆದ ಐದು ವರ್ಷಗಳಿಂದ ಜಾರಿಯಲ್ಲಿದ್ದ ಜನಸಹಭಾಗಿತ್ವದ ಅರಣ್ಯ ಯೋಜನೆಯ ಕುರಿತಾಗಿ ಮಳಗಿಯ ಸುದರ್ಶನ್ ಮಾತನಾಡಿದರು. ಶಿವಮೊಗ್ಗ ಜಿಲ್ಲೆಯಲ್ಲಿ ಈಗಷ್ಟೇ ಪಶ್ಚಿಮಘಟ್ಟ ಅರಣ್ಯಾಭಿವೃದ್ಧಿ ಯೋಜನೆ ಆರಂಭವಾಗಿರುವುದರಿಂದ ಅಲ್ಲಿನ ಅನುಭವಗಳನ್ನು ಸಭೆಗೆ ತಿಳಿಸಲು ಶ್ರೀ ಮಹೇಂದ್ರಕುಮಾರ್ ಮುಂದಾದರು. ಕರ್ನಾಟಕ ಅರಣ್ಯಾಭಿವೃದ್ಧಿಯ ಸುಮಾರು ೧೫ವರ್ಷಗಳ ಸುದೀರ್ಘ ಇತಿಹಾಸವನ್ನು ಮೇಲ್ಕಾಣಿಸಿದ ಸಂಪನ್ಮೂಲ ವ್ಯಕ್ತಿಗಳು ಕೇವಲ ಒಂದು ತಾಸಿನೊಳಗಾಗಿ ವಿವರಿಸಿದ್ದರು.

ಕಾರ್ಯಾಗಾರದ ಮುಖ್ಯ ವಿಷಯವಾಗಿದ್ದ ಬಯಲುಸೀಮೆಯ ಅರಣ್ಯೀಕರಣ ಯೋಜನೆಯ ಪ್ರಮುಖ ಅಂಶಗಳ ಬಗ್ಗೆ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳಿಗೆ ತಿಳಿಸುವ ಕಾರ್ಯವನ್ನು ಶ್ರೀ ಶಿವಾನಂದ ಕಳವೆ ಮಾಡಿದರು. ಫೆವಾರ್ಡ್ ಕೆ. ಈ ಯೋಜನೆಯ ಬಗ್ಗೆ ಈ ವರೆಗೆ ಮಾಡಿದ ಕಾರ್ಯಗಳ ಬಗ್ಗೆ ಬೆಂಗಳೂರಿನ ಶ್ರೀ ಗುರುರಾಜ ಬುದ್ಯ ತಿಳಿಸಿದರು. ಈ ಕಾರ್ಯಾಗಾರದಲ್ಲಿ ಯೋಜನೆಯ ಕುರಿತಾಗಿ ಚರ್ಚಿಸಬೇಕಾದ ಸಂಗತಿಗಳ ಪಟ್ಟಿ ಮಾಡುವ ಕಾಲ ಈಗ ಸನ್ನಿಹಿತವಾಗಿತ್ತು. ಸಾಕಷ್ಟು ಮಾಹಿತಿ, ವಿವರಣೆಗಳು ಉಪನ್ಯಾಸಗಳ ಮುಖೇನ ದೊರಕಿದ್ದರಿಂದ ಈಗ ಕಾರ್ಯಾಗಾರದ ನಿರೀಕ್ಷೆಗಳ ಕ್ರೋಢೀಕರಣ ಆರಂಭವಾಯಿತು. ಸಂಗ್ರಹಿತ ನಿರೀಕ್ಷೆಗಳನ್ನು ಪರಿಷ್ಕರಿಸಲಾಯಿತು. ವಿವಿಧ ವಿಷಯಗಳ ಬಗ್ಗೆ ಚರ್ಚಿಸಲು ಪ್ರತಿನಿಧಿಗಳ ಐದು ಗುಂಪುಗಳು ರಚನೆಯಾದವು. ಮೊದಲ ದಿನದ ಸಾಯಂಕಾಲದ ಹೊತ್ತಿಗೆ ಈ ಗುಂಪುಗಳವರು ತಮ್ಮ ಚರ್ಚೆಯ ಫಲಶೃತಿಗಳನ್ನು ಸಭೆಯೆದುರು ಇಡತೊಡಗಿದರು.

ಗುಂಪು ಚರ್ಚೆಯ ಸಂದರ್ಭದಲ್ಲಿ 'ರಾಷ್ಟ್ರೀಯ ಅರಣ್ಯ ನೀತಿ'ಯ ಬಗ್ಗೆ ವಿವರಗಳಿಗಾಗಿ ಕೆಲವರು ಬಯಸಿದ್ದರು. ಕಾರ್ಯಾಗಾರದ ಪ್ರಥಮ ದಿನದ ಕೊನೆಯ ಹತ್ತು ನಿಮಿಷದ ಸೀಮಿತ ಅವಧಿಯಲ್ಲಿ ಶ್ರೀ ಎಸ್. ಆರ್. ಹಿರೇಮಠ ಈ ಬಗ್ಗೆ ಸಂಕ್ಷೇಪಿಸಿದರು. ೧೯೨೭ರ ರಾಷ್ಟ್ರೀಯ ಅರಣ್ಯ ನೀತಿ ಈಗ ಜಾರಿಯಲ್ಲಿದೆ. ೧೯೮೮ರ ನೂತನ ರಾಷ್ಟ್ರೀಯ ಅರಣ್ಯ ನೀತಿ ಕಾನೂನಾಗಿ ಮಾರ್ಪಡಬೇಕಾದ್ದು ತುರ್ತು ಅಗತ್ಯ ಎಂದರು "All a out draft Forest Bill ಮತ್ತು Amandment draft Forest Bill -- ೧೯೯೫ " ಸಮಗ್ರವಾಗಿ ಜನರ ಸಹಭಾಗಿತ್ವದ ಬಗ್ಗೆ ತಿಳಿಸುತ್ತದೆ ಎಂದರು. ಹೊಸ ರಾಷ್ಟ್ರೀಯ ಅರಣ್ಯ ನೀತಿಯು ಅರಣ್ಯ ನಿರ್ವಹಣೆಯಲ್ಲಿ ಪ್ರಥಮಾದ್ಯತೆಯನ್ನು ಸ್ಥಳೀಯ ಜನರಿಗೆ ನೀಡಿದೆ. ಅಲ್ಲದೇ ಅರಣ್ಯ ಉತ್ಪನ್ನವು ಜನರಿಗೆ ಸೇರಿದ್ದು ಎಂದು ತಿಳಿಸಿದೆ. ಇದರ ಅನುಷ್ಠಾನಕ್ಕಾಗಿ 'ಸಾಮೂಹಿಕ ಸಂಪನ್ಮೂಲಗಳ ಮೇಲೆ ಜನರ ಹಕ್ಕು' ಎಂಬ ಎರಡನೇ ಸ್ವಾತಂತ್ರ್ಯ ಆಂದೋಲನ ಈಗ ನಡೆಯುತ್ತಿದೆ ಎಂದರು. 'ಸ್ವಯಂ ಆಡಳಿತ ಪರಿಕಲ್ಪನೆಯಲ್ಲಿ ಈ ಆಂದೋಲನ ಮುಂದುವರಿಯುವುದಾಗಿ ತಿಳಿಸಿದರು.

ಕಾರ್ಯಾಗಾರದ ಎರಡನೇ ದಿನ (ಫೆಬ್ರುವರಿ ೨೧) ಬೆಳಿಗ್ಗೆ ೯-೩೦ಕ್ಕೆ ಪ್ರತಿನಿಧಿಗಳು ಸಭೆ ಸೇರಿದರು. ವಿವಿಧ ಗುಂಪುಗಳು ಮಂಡಿಸಿದ ವಿಚಾರಗಳ ಕುರಿತು ಕೆಲಕಾಲ ಚರ್ಚೆ ನಡೆಯಿತು. ಬಿಜಾಪುರ ಜಿಲ್ಲೆ (ಈಗಿನ ಬಾಗಲಕೋಟೆ ಜಿಲ್ಲೆ)ಯ ಜಮಖಂಡಿ ಸನಿಹದ ಕಲ್ಲಳ್ಳಿ ಗ್ರಾಮದ ಸಂಗಪ್ಪ ಉಪ್ಪಲದಿನ್ನಿ ಕಾಡು ಬೆಳೆಸಿದ ತಮ್ಮ ಅನುಭವ ಹಂಚಿಕೊಂಡರು. ಹಾಜರಿದ್ದ ೧೪ ಜಿಲ್ಲೆಗಳ ವಿವಿಧ ಸಂಸ್ಥೆಗಳ ಪ್ರತಿನಿಧಿಗಳೆಲ್ಲ ತಮ್ಮ ತಮ್ಮ ಜಿಲ್ಲೆಗಳಲ್ಲಿ ಈ ಯೋಜನೆಯ ಬಗ್ಗೆ ಹಾಕಿಕೊಳ್ಳಲಿರುವ ಕಾರ್ಯಕ್ರಮದ ಬಗ್ಗೆ ಚರ್ಚಿಸಲು ಪ್ರತ್ಯೇಕವಾಗಿ ಸಭೆ ಸೇರಲು ಸೂಚಿಸಲಾಯಿತು. ಪ್ರತಿ ಜಿಲ್ಲೆಗೆ ಸಂಬಂಧಿಸಿದ ಎಲ್ಲ ಸಂಸ್ಥೆಗಳವರೂ ಚರ್ಚಿಸಿ ತಮ್ಮ ಮುಂದಿನ ಕಾರ್ಯಯೋಜನೆಯ ವರದಿಗಳನ್ನು ನಂತರ ಸಭೆಗೆ ತಿಳಿಸಿದರು. ಕಾರ್ಯಾಗಾರ ಬಯಲುಸೀಮೆಯ ಅರಣ್ಯೀಕರಣ ಯೋಜನೆಯ ಬಗ್ಗೆ ಅತ್ಯಂತ ಮಹತ್ವದ ವಿಚಾರಗಳನ್ನು ಚರ್ಚಿಸಿದ್ದರಿಂದ ಈ ಚರ್ಚೆಯ ಆಧಾರದ ಮೇಲೆ ಪ್ರಮುಖ ಠರಾವುಗಳನ್ನು ಸ್ವೀಕರಿಸಲು ನಿರ್ಧರಿಸಲಾಗಿತ್ತು. ಆ ಪ್ರಕಾರವಾಗಿ ಸಮಾಜ ಪರಿವರ್ತನ ಸಮುದಾಯದ ಶ್ರೀ ಲೋಕೇಶ ಗೌಡ, ಶ್ರೀ ಸುದರ್ಶನ್, ಶ್ರೀ ಮಹೇಂದ್ರ ಕುಮಾರ್ ಹಾಗೂ ಶ್ರೀ ಗುರುರಾಜ ಬುದ್ಯ ಮುಂತಾದವರೆಲ್ಲಾ ಸೇರಿ ಠರಾವುಗಳ ಕ್ರೋಡೀಕರಣ ಕಾರ್ಯ ನಡೆಸಿ ಸಭೆಯ ಮುಂದಿಟ್ಟರು. ಸಭೆ ಸರ್ವಾನುಮತದಿಂದ ಸ್ವೀಕರಿಸಿದ ಈ ಠರಾವಿನ ಪ್ರತಿಯನ್ನು ಜಪಾನಿನ ದಾನಿ ಸಂಸ್ಥೆಗೆ, ಭಾರತ ಪ್ರಧಾನ ಮಂತ್ರಿಗಳಿಗೆ, ಪರಿಸರ ಮಂತ್ರಾಲಯಕ್ಕೆ, ಕರ್ನಾಟಕ ಅರಣ್ಯ ಹಾಗೂ ಪರಿಸರ ಇಲಾಖೆಗೆ, ಅರಣ್ಯ ಇಲಾಖೆಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಇಲಾಖೆಯ ಯೋಜನೆಯ ಮುಖ್ಯಾಧಿಕಾರಿಗೆ ಕಳಿಸಲು ನಿರ್ಧರಿಸಲಾಯಿತು. ಕಾರ್ಯಾಗಾರ ಮುಕ್ತಾಯ.

ಬೆಂಗಳೂರಿನಲ್ಲಿರುವ ಫೆವಾರ್ಡ್ ಕೆ.ಯವರು ಕಾರ್ಯಾಗಾರ ಕೈಗೊಂಡ ನಿರ್ಣಯಗಳ ಬಗ್ಗೆ ಅನುಸರಣೆ ಬಗ್ಗೆ ಕ್ರಮ ಕೈಗೊಳ್ಳಲು ಸಭೆ ವಿನಂತಿಸಿಕೊಂಡಿತು. ಈ ಯೋಜನೆಯ ಮುಂದಿನ ಅನುಸರಣಾ ಸಭೆ ನಡೆಸಲು ಬಿಜಾಪುರ ಜಿಲ್ಲಾ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಮುಂದಾದರು. ಮುಂದಿನ ಅನುಸರಣಾ ಸಭೆ ಜೂನ್ ೨೭. ೧೯೯೮ರಂದು ಬಿಜಾಪುರದಲ್ಲಿ ನಡೆಯಲಿರುವುದಾಗಿ ತಿಳಿಸಿದ ಬಿಜಾಪುರದ ಶ್ರೀ ರಮೇಶ್ ಎಲ್ಲರನ್ನೂ ಮುಂದಿನ ಕಾರ್ಯಾಗಾರಕ್ಕೆ ಆಹ್ವಾನಿಸಿದರು. ಯೋಜನೆ ಬಗ್ಗೆ ಹೆಚ್ಚಿನ ಮಾಹಿತಿಗಳೊಂದಿಗೆ ಬರುವಂತೆ ಕೋರಿದರು. ಕಾರ್ಯಾಗಾರ ಒಂದೇ ದಿನದ್ದಾದ್ದರಿಂದ ಬೆಳಗಿನಿಂದಲೇ ಕಾರ್ಯಕ್ರಮ ಆರಂಭವಾಗಬೇಕು. ದೂರದ ಊರಿನ ಪ್ರತಿನಿಧಿಗಳು ಜೂನ್ ೨೬ರ ಸಾಯಂಕಾಲವೇ ಬಿಜಾಪುರದಲ್ಲಿರಬೇಕೆಂದು ತಿಳಿಸಿದರು.

ಸಂಪರ್ಕ ವಿಳಾಸ :- ಶ್ರೀ ರಮೇಶ್ ಎಚ್. ಬಿ. ಯುವಕ ವಿಕಾಸ ಕೇಂದ್ರ, ಬಿ.ಡಿ.ಎ. ನಿವೇಶನ, ನಂ. ೨೯, ಅಂಬೇಡ್ಕರ್ ಭವನದ ಹಿಂಭಾಗ, ಹುಡ್ಕೋ ಕಾಲೋನಿ, ಬಿಜಾಪುರ - ೫೮೬೧೦, ದೂರವಾಣಿ : ೦೮೩೫೨-೫೪೮೭೦

## : ಮೌಲ್ಯಮಾಪನ :

ಶಿಬಿರಾರ್ಥಿಗಳು ಎರಡು ದಿನದ ಕಾರ್ಯಾಗಾರದ ಬಗ್ಗೆ ಸ್ವಯಂ ಮೌಲ್ಯ ಮಾಡಿ ಈ ಕೆಳಗಿನ ಅಂಶಗಳನ್ನು ತಿಳಿಸಿದರು:

೧) ಕಾರ್ಯಾಗಾರದ ಸ್ಥಳ, ವ್ಯವಸ್ಥೆ ಚೆನ್ನಾಗಿತ್ತು. ವಸತಿ ಮತ್ತು ಸ್ನಾನದ ಸೌಲಭ್ಯ ಕುರಿತು ಗಮನ ನೀಡಬೇಕು.

೨) ಕಾರ್ಯಾಗಾರಕ್ಕೆ ಆಯ್ದುಕೊಂಡ ವಿಷಯ ಚರ್ಚೆಗೆ ಯೋಗ್ಯವಾಗಿತ್ತು. ಈ ವಿಷಯ ಕುರಿತು ಮೊದಲೇ ಕಾರ್ಯಾಗಾರ ಹಮ್ಮಿಕೊಳ್ಳಬೇಕಿತ್ತು.

೩) ಈ ಕಾರ್ಯಾಗಾರದಲ್ಲಿ ಕೈಕೊಂಡ ನಿರ್ಣಯದ ಕುರಿತು ಗಂಭೀರವಾದ ಅನುಸರಣೆಯಾಗಬೇಕು.

೪) ಎಲ್ಲ ಶಿಬಿರಾರ್ಥಿಗಳು ಒಂದೆಡೆಯೇ ಇರಬೇಕು. ಶಿಬಿರಾರ್ಥಿಗಳಿಗೆ ಬೇರೆ ಬೇರೆ ಕಡೆ ಉಳಿದುಕೊಳ್ಳುವ ವ್ಯವಸ್ಥೆ ಮಾಡಬಾರದು.

೫) ಅತೀ ಕಡಿಮೆ ಖರ್ಚಿನಲ್ಲಿ ಸ್ಥಳೀಯ ಜನರ ಸಹಯೋಗದಿಂದ ಸಂಘಟಿಸಿದ ಕಾರ್ಯಾಗಾರ ಚೆನ್ನಾಗಿತ್ತು.

೬) 'ಬಾಲ ಕಾರ್ಮಿಕ' ನೊಬ್ಬನನ್ನು ಕೆಲಸದ ಸಹಾಯಕ್ಕೆ ನೇಮಿಸಿಕೊಂಡಿದ್ದು 'ಬಾಲ ಕಾರ್ಮಿಕ ಪದ್ಧತಿ' ವಿಮೋಚನೆಗೆ ಹೋರಾಡಿದ ಹಲವು ಸಂಘ ಸಂಸ್ಥೆಯ ಪ್ರತಿನಿಧಿಗಳಿಗೆ ಮುಜುಗರ ಉಂಟು ಮಾಡಿತು.

೭) ಊಟ ತಯಾರು ಮಾಡುವ, ಬಡಿಸುವ, ಕಸ ಗುಡಿಸುವವರೆಲ್ಲರೂ ಕಾರ್ಯಾಗಾರಕ್ಕೆ ಶಿಬಿರಾರ್ಥಿಗಳೆಂದು ತಿಳಿದು ಸಂತೋಷ, ಆಶ್ಚರ್ಯ ಉಂಟಾಯಿತು.

೮) ಕಾರ್ಯಾಗಾರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಅಳವಡಿಸಬೇಕಿತ್ತು.

೯) ಅರಣ್ಯ ಇಲಾಖಾಧಿಕಾರಿಗಳು ಬಂದು ಯೋಜನೆಯ ಬಗ್ಗೆ ವಿವರವಾಗಿ ಮಾಹಿತಿ ನೀಡಬೇಕಿತ್ತು.

೧೦) ಮಹಿಳಾ ಪ್ರತಿನಿಧಿಗಳು ಕಡಿಮೆ ಇದ್ದರು. ಸ್ಥಳೀಯ ಜನ, ರೈತರು, ಹಳ್ಳಿಗರು ಭಾಗವಹಿಸಬೇಕಿತ್ತು.

ಎರಡು ದಿನದ ಕಾರ್ಯಾಗಾರಕ್ಕೆ ಶ್ರೀ ಗುರುರಾಜರವರು ವಂದನೆ ಸಲ್ಲಿಸಿದರು. ಶ್ರೀ ಜಿ.ಎನ್. ಸಿಂಹರವರು ಈ ಕಾರ್ಯಾಗಾರಕ್ಕೆ ಪೂರಕ, ಅವಶ್ಯಕ ವ್ಯವಸ್ಥೆ ಕಲ್ಪಿಸುವಲ್ಲಿ ದುಡಿದ ಸ್ಥಳೀಯ ಮಹಿಳೆಯರಿಗೆ ಹಾಗೂ ಶ್ರೀ ರೇಣುಕಾ ಕಲ್ಯಾಣ ಮಂಟಪದಲ್ಲಿ ಕಾರ್ಯಕ್ರಮ ನಡೆಸಲು ಅನುಮತಿ ನೀಡಿದವರಿಗೆ ಕೃತಜ್ಞತೆ ಸಲ್ಲಿಸಿದರು. ಪ್ರತಿನಿಧಿಗಳು ಕಾರ್ಯಾಗಾರದ ಕೊನೆಯಲ್ಲಿ ಹಾಡು. ನಂತರವೂ ಮನದಲ್ಲಿ ತೇಲುತ್ತಿತ್ತು.

'ಎಲ್ಲಿಂದ ಬಂದಿರೆಂದು ಕೇಳಬಹುದು ನೀವು?
ಜನರ ನಡುವಿನಿಂದ ಎಂದು ಹೇಳುತೇವೆऽ ನಾವು.
ಈಗ ಪಯಣ ಎಲ್ಲಿಗೆಂದು ಕೇಳಬಹುದು ನೀವು?
ಮತ್ತೆ ಜನರಾऽ ಬಳಿಗೆ ಎಂದು ಹೇಳುತೇವೆऽ ನಾವು.'

# ಅರಣ್ಯ ಇಲಾಖೆ ವರ್ತನೆಯಲ್ಲಿ 'ದೊಡ್ಡ ಜಮೀನ್ದಾರರಂತೆ'

- ಎಸ್.ಆರ್. ಹಿರೇಮಠ

ಕರ್ನಾಟಕ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ ಹಾಗೂ ಅರಣ್ಯ ಮತ್ತು ಸಾಮೂಹಿಕ ಭೂಮಿ ಚಾಲನಾ ಸಮಿತಿಯ ಮುಖ್ಯಸ್ಥರಾದ ಶ್ರೀ ಎಸ್. ಆರ್. ಹಿರೇಮಠ ಪೂರ್ವ ವಲಯ ಅರಣ್ಯ ಮತ್ತು ಪರಿಸರ ಯೋಜನೆಯ ಕಾರ್ಯಾಗಾರಕ್ಕೆ ಆಹ್ವಾನಿತ ಸಂಪನ್ಮೂಲ ವ್ಯಕ್ತಿಗಳನ್ನು, ಪ್ರತಿನಿಧಿಗಳನ್ನು ಸ್ವಾಗತಿಸಿದರು. ಜಪಾನ್ ನೆರವಿನ ಈ ಅರಣ್ಯ ಯೋಜನೆಯ ಮಾಹಿತಿಯನ್ನು ಸ್ವಯಂಸೇವಾ ಸಂಸ್ಥೆಗಳು ಪಡೆಯಬೇಕಾಗಿವೆ. ಸ್ಥಳೀಯ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಜನರ ಪಾಲ್ಗೊಳ್ಳುವಿಕೆ ಅತ್ಯಗತ್ಯ. ಆದರೆ ಈ ಪೂರ್ವ ವಲಯ ಅರಣ್ಯೀಕರಣ ಯೋಜನೆಯಲ್ಲಿ ಜನರ ಪಾಲ್ಗೊಳ್ಳುವಿಕೆಯ ಅವಕಾಶ ಕಡಿಮೆಯಿದೆ. ಯೋಜನೆ ಜನಪರವಾಗದೇ ಜಾರಿಯಾದರೆ ಸಂಪನ್ಮೂಲ ನಿರ್ವಹಣೆಯಲ್ಲಿ ಜನರ ಸಹಭಾಗಿತ್ವವಿರಬೇಕೆಂಬ ಮಾತಿಗೆ ಅರ್ಥವೇ ಇರದು. ಈ ಹಿನ್ನೆಲೆಯಲ್ಲಿ ಈ ಎರಡು ದಿನಗಳ ಕಾರ್ಯಾಗಾರದಲ್ಲಿ ಎಲ್ಲರೂ ಸಕ್ರಿಯವಾಗಿ ಪಾಲ್ಗೊಂಡು ಯೋಜನೆಯ ವಸ್ತು ಸ್ಥಿತಿಯ ವಿಶ್ಲೇಷಣೆ ಮಾಡುವಂತೆ ಪ್ರತಿನಿಧಿಗಳಲ್ಲಿ ಕೋರಿದರು. ಅಗತ್ಯವಿರುವ ಸೂಕ್ತ ಬದಲಾವಣೆಗಳನ್ನು ಪಟ್ಟಿ ಮಾಡಬೇಕು. ಇದನ್ನು ಜಪಾನಿನ ದಾನಿ ಸಂಸ್ಥೆಗೆ ಹಾಗೂ ಕರ್ನಾಟಕ ಅರಣ್ಯ ಇಲಾಖೆಗೆ ನೀಡಿ ಸೂಕ್ತ ತಿದ್ದುಪಡಿಗಾಗಿ ಒತ್ತಾಯಿಸಬೇಕು ಎಂದರು.

೧೯೮೭ರಲ್ಲಿ ಕರ್ನಾಟಕ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ ಆರಂಭವಾದ ಹಿನ್ನೆಲೆಯನ್ನು ಈ ಸಂದರ್ಭದಲ್ಲಿ ಹಿರೇಮಠ ಪ್ರಸ್ತಾಪಿಸಿದರು. ಬೇರೆ ಬೇರೆ ಸಂಸ್ಥೆಗಳಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿದ್ದವರೆಲ್ಲ ಕೂಡಿ ಕೆಲಸ ಮಾಡುವ ನಿರ್ಧಾರವಾಯಿತು. ಪರಸ್ಪರ ಸಾಮಾಜಿಕ ಅನುಭವಗಳ ಹಂಚಿಕೆ. ಸಮಸ್ಯೆಗಳ ಪರಿಹಾರಕ್ಕೆ ಎಲ್ಲರೂ ಸೇರಿ ಪ್ರಯತ್ನಿಸುವ ಚಿಂತನೆ ಬೆಳೆದು ಫೆವಾರ್ಡ್ ಕೆ. (ಕರ್ನಾಟಕ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ.) ಉದಯವಾಯಿತು. ವಿಶೇಷವಾಗಿ ಈ ಒಕ್ಕೂಟ ಅರಣ್ಯೀಕರಣದ ಬಗ್ಗೆ ಚಿಂತನೆ ಆರಂಭಿಸುವ ಸಂದರ್ಭ ೧೯೮೪ರಲ್ಲಿ ಸೃಷ್ಟಿಯಾಯಿತು. ೧೯೮೩-೮೮ರ ವರೆಗೆ ಕರ್ನಾಟಕದಲ್ಲಿ ಜನರ ಉರುವಲು ಹಾಗೂ ದೈನಂದಿನ ಅಗತ್ಯ ಪೂರೈಸಲು ಜನಪರ ಅರಣ್ಯ ಬೆಳೆಸುವ ಯೋಜನೆ ಜಾರಿಯಾಯಿತು. ಸಾಮಾಜಿಕ ಅರಣ್ಯ ಯೋಜನೆ ಎಂಬ ಹೆಸರಿನ ಈ ಯೋಜನೆ ೫೫ ಕೋಟಿ ರೂಪಾಯಿ ವೆಚ್ಚದಲ್ಲಿ ವಿಶ್ವಬ್ಯಾಂಕ್ ಹಾಗೂ ಸಾಗರೋತ್ತರ ಅಭಿವೃದ್ಧಿ ಸಂಸ್ಥೆಗಳು ನೀಡಿದ ಧನ ಸಹಾಯದಲ್ಲಿ ಕರ್ನಾಟಕದಲ್ಲಿ ಜಾರಿಯಾಯಿತು. ಈ ಯೋಜನೆಯ ನೀತಿ ಮತ್ತು ಕಾರ್ಯಾಚರಣೆಯಲ್ಲಿನ ದೋಷಗಳನ್ನು ಪಟ್ಟಿ ಮಾಡಿದ ಫೆವಾರ್ಡ್ ಕೆ. ಮುಖ್ಯಮಂತ್ರಿ, ಪ್ರಧಾನಮಂತ್ರಿ ಹಾಗೂ ವಿಶ್ವಬ್ಯಾಂಕ್ ಅಧ್ಯಕ್ಷರಿಗೆ ಅದನ್ನು ಕಳಿಸಿತು. ಬಡವರಿಗೆ ಉಪಯೋಗಕ್ಕೆಂದು ಸುಳ್ಳು ಹೇಳಿ ನೀಲಗಿರಿ ನೆಡುತೋಪು ಬೆಳೆಸಿ ಕಾರ್ಖಾನೆಗಳಿಗೆ ಯೋಜನೆ ನೆರವಾಗಿದ್ದನ್ನು ಎತ್ತಿ ತೋರಿಸಿದೆವು. ೮೦ ಪ್ರತಿಶತ ಹಣ ನೀಲಗಿರಿ ಕಾಡು ಬೆಳೆಸಲಾಗಿತ್ತು. ಯೋಜನೆಯ ಹಣವೂ ಅರ್ಧ ಖರ್ಚಾಗಿತ್ತು. 'ಫೆವಾರ್ಡ್ ಕೆ.'ಯ ಮನವಿಗೆ ವಿಶ್ವಸಂಸ್ಥೆಯವರು ಸ್ಪಂದಿಸಿದರು. ಪಶ್ಚಿಮ ಘಟ್ಟದಲ್ಲಿ ನೀಲಗಿರಿ ಕಾಡು ಬೆಳೆಸುವುದನ್ನು ವಿರೋಧಿಸಿ ಭಾರೀ ಪ್ರತಿಭಟನೆಗಳು ನಡೆದವು. 'ಜನೋಪಯೋಗಿ ಗಿಡ ಬೆಳೆಸುವುದಾಗಿ' ಅರಣ್ಯ ಇಲಾಖೆ ಹೇಳತೊಡಗಿತು.

ನೀಲಗಿರಿ ವಿರೋಧಿ ಚಳುವಳಿ ಜೋರಾದಾಗ ಅತ್ತ ವಿದೇಶಿ ಸಂಸ್ಥೆಗಳು ಕರ್ನಾಟಕಕ್ಕೆ ಹಣ ನೀಡಲು ಹಿಂದೇಟು ಹಾಕತೊಡಗಿದವು. ಯೋಜನೆಗೆ ಸರಕಾರ, ಸ್ವಯಂ ಸೇವಾ ಸಂಸ್ಥೆಗಳು, ಅಧಿಕಾರಿಗಳ ಒಪ್ಪಿಗೆ ಇದ್ದಲ್ಲಿ ಮಾತ್ರ ಅಂತಹ ಯೋಜನೆ ಕಾರ್ಯರೂಪಕ್ಕಿಳಿಸುವುದಾಗಿ ಆಗಿನ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಪರಮೇಶ್ವರಪ್ಪ ತಿಳಿಸಿದರು.

೧೯೯೪ರಲ್ಲಿ ಜಂಟಿ ಅರಣ್ಯ ಯೋಜನೆಯ ಸಲಹಾ ಸಮಿತಿಯಲ್ಲಿ ಫೆವಾರ್ಡ್ ಕೆ. ಪ್ರತಿನಿಧಿಗಳಿಗೆ ಅವಕಾಶ ನೀಡಲಾಯಿತು. ಪಶ್ಚಿಮಘಟ್ಟ ಅರಣ್ಯಾಭಿವೃದ್ಧಿಗಾಗಿ ಜನ ಸಹಭಾಗಿತ್ವದ ಯೋಜನೆ ಜಾರಿಯಾಗಿದೆಯಾದರೂ ಯೋಜನೆಯಲ್ಲಿ ಸಾಕಷ್ಟು ದೋಷಗಳು ಉಳಿದಿವೆ. ಸರಕಾರಿ ಆಜ್ಞೆಯ ದೋಷಗಳ ಜೊತೆಗೆ ಕಾರ್ಯವಿಧಾನದಲ್ಲಿ ಬಹಳ ತಪ್ಪುಗಳಿವೆ. ಮಹಿಳೆಯರ ಬಗ್ಗೆ ನಿರ್ಲಕ್ಷ್ಯಗಳಿವೆ. ಅರಣ್ಯ ಇಲಾಖೆ ಎಷ್ಟೆಂದರೂ ದೊಡ್ಡ ಜಮೀನ್ದಾರನಿದ್ದಂತೆ. ಒಟ್ಟಿನಲ್ಲಿ ಇಲಾಖೆ ಜನಪರವಾಗಿಲ್ಲ. ಜನರೊಂದಿಗೆ ಕೂಡಿ ಅಭಿವೃದ್ಧಿ ಮಾಡುವ ಮನೋಭಾವ ಅದರಲ್ಲಿ ಬೆಳೆದಿಲ್ಲ. ನಾವು ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಸರಕಾರಿ ಆಜ್ಞೆಯ ದೋಷಗಳ ತಿದ್ದುಪಡಿಗಾಗಿ ಹೋರಾಡುವುದರ ಜೊತೆಗೆ ಇಲಾಖೆಯನ್ನು ಜಮೀನ್ದಾರಿ ನೀತಿಯ ಏಕಸ್ವಾಮ್ಯದಿಂದ ಬದಲಿಸಬೇಕಾಗಿದೆ ಎಂದು ಹಿರೇಮಠ ಮಾರ್ಮಿಕವಾಗಿ ನುಡಿದರು. ಸಾಮಾಜಿಕ ಅರಣ್ಯ ಯೋಜನೆ ದೋಷಗಳ ಹೋರಾಟದಲ್ಲಿ ೧೯೮೪ರಲ್ಲಿ ತಮ್ಮೊಂದಿಗೆ ದುಡಿದ ಶ್ರೀ ಎಸ್. ಆರ್. ರಾಮಸ್ವಾಮಿ, ಶ್ರೀ ಎಲ್.ಟಿ. ಶರ್ಮಾರ ಸಹಕಾರಗಳನ್ನು ಇಲ್ಲಿ ಸ್ಮರಿಸಿಕೊಂಡರು.

••• ••• •••

# ವಿಫಲವಾದ ಪಶ್ಚಿಮಘಟ್ಟದ ಯೋಜನೆ ೮೦ ಕೋಟಿಯದು
# ಆದರೆ-ಈ ಯೋಜನೆ ೫೭೬.೫೫ ಕೋಟಿಯದು....

- ಪಾಂಡುರಂಗ ಹೆಗಡೆ

ಶಿರಸಿಯ ಪರಿಸರ ಸಂರಕ್ಷಣಾ ಕೇಂದ್ರದ ಶ್ರೀ ಪಾಂಡುರಂಗ ಹೆಗಡೆ ಕಾರ್ಯಾಗಾರದಲ್ಲಿ ಪಶ್ಚಿಮಘಟ್ಟದ ಅರಣ್ಯಾಭಿವೃದ್ಧಿಯ ವೈಖರಿ ಹಾಗೂ ಈ ಯೋಜನೆಯ ಅಧ್ಯಯನ ನಡೆಸಿದ ಎನ್. ಸಿ. ಸಕ್ಸೇನಾ ನಾಯಕತ್ವದ ವರದಿಯ ಬಗ್ಗೆ ಬೆಳಕು ಚೆಲ್ಲಿದರು. ಬ್ರಿಟನ್ನಿನ ಸಾಗರೋತ್ತರ ಅಭಿವೃದ್ಧಿ ಸಂಸ್ಥೆ (ಒ.ಸಿ.ಎ.) ಪಶ್ಚಿಮ ಘಟ್ಟದ ಸಂರಕ್ಷಣೆ, ಸಂವರ್ಧನೆಗಾಗಿ ೮೦ ಕೋಟಿ ರೂಪಾಯಿಗಳನ್ನು ೧೯೯೨ರಲ್ಲಿ ನೀಡಿತ್ತು. ಜನ ಸಹಭಾಗಿತ್ವದಲ್ಲಿ ಈ ಹಣದಿಂದ ಅರಣ್ಯಾಭಿವೃದ್ಧಿ ಮಾಡಲು ತಾಕೀತು ಹಾಕಿತ್ತು. ಈ ಹಿನ್ನೆಲೆಯಲ್ಲೆ ಕರ್ನಾಟಕ ಸರಕಾರ ಜಂಟಿ ಅರಣ್ಯ ಯೋಜನೆ ಹಾಗೂ ನಿರ್ವಹಣೆ ಯೋಜನೆ (ಜೆ. ಎಫ್.ಪಿ.ಎಮ್.) ಆದೇಶ ಹೊರಡಿಸಿತ್ತು. ೧೯೯೩ರಿಂದ ರಾಜ್ಯದ ಉತ್ತರ ಕನ್ನಡದಲ್ಲಿ ಪ್ರಥಮ ಹಂತದ ಯೋಜನೆ ಜಾರಿಯಾಯಿತು. ಈ ಸಂದರ್ಭದಲ್ಲಿ ಯೋಜನೆಯ ದೋಷಗಳನ್ನು ಪಟ್ಟಿ ಮಾಡಿದಾಗ ಇದು ಜಂಟಿ ಅರಣ್ಯ ಯೋಜನೆಯಲ್ಲ ಒಂಟಿ ಅರಣ್ಯ ಯೋಜನೆ ಎಂಬುದು ಜಿಲ್ಲೆಯ ಪರಿಸರ ಪ್ರೇಮಿಗಳಿಗೆ, ಸ್ವಯಂ ಸೇವಾ ಸಂಸ್ಥೆಗಳಿಗೆ ಮನವರಿಕೆಯಾಯಿತು. ಈ ಬಗ್ಗೆ ಯೋಜನೆ ಆರಂಭದಿಂದಲೂ ಟೀಕೆ ವ್ಯಕ್ತವಾಯಿತು. ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸಿ ಅರಣ್ಯ ನಿರ್ವಹಣೆಯ ಅಧಿಕಾರ ನೀಡುವುದು. ಅರಣ್ಯದ ಅಂತಿಮ ಉತ್ಪನ್ನದಲ್ಲಿ ಪಾಲು ನೀಡುವ ಕಾರ್ಯಕ್ರಮಗಳೂ ಯೋಜನೆಯಲ್ಲಿದ್ದವು. ಆದರೆ ಇಲಾಖೆ ರಚಿಸಿದ ಅರಣ್ಯ ಸಮಿತಿಗಳಲ್ಲಿ ಗ್ರಾಮಸ್ಥರಿಗೆ ಅಧಿಕಾರವೇ ಇರಲಿಲ್ಲ. ಫಾರೆಸ್ಟರ್‌ಗಳು ಸಮಿತಿಯ ಕಾರ್ಯದರ್ಶಿಯಾಗಿದ್ದರು. ಹಳ್ಳಿಯ ಸನಿಹದ ಬೋಳುಗುಡ್ಡಗಳು ಅಕೇಶಿಯಾ ಗಿಡಗಳನ್ನು ನಾಟಿ ಮಾಡಿದ ನಂತರ ಹಳ್ಳಿಗರನ್ನು ಕೂಡಿಸಿ ಸಮಿತಿಯನ್ನು ನೆಪಕ್ಕೆ ಮಾತ್ರ ರಚಿಸಲಾಗಿತ್ತು. ಇಲಾಖೆಗೆ ಬೇಕಾದ ಠರಾವು ಪಾಸುಮಾಡುವ ಕೆಲಸಕ್ಕಷ್ಟೇ ಇವರು ಕ್ರಿಯಾಶೀಲರಾಗಿರುವಂತಾಯಿತು. ಸುಮಾರು ೨೨೦ಕ್ಕೂ ಹೆಚ್ಚು ಗ್ರಾಮ ಅರಣ್ಯ ಸಮಿತಿಗಳು ರಚನೆಯಾಗಿದ್ದವಾದರೂ ಎಲ್ಲ ಸಮಿತಿಗಳೂ ಅಧಿಕಾರಿಗಳ ಹಿಡಿತದಲ್ಲಿರುವಂತಹ ಸ್ಥಿತಿಯಿತ್ತು.

ಈ ಯೋಜನೆಯ ರೂಪು ರೇಷೆಯೇ ಸರಿಯಾಗಿಲ್ಲ. ಕೇವಲ ಹೆಸರಿಗೆ ಮಾತ್ರ ಜನಸಹಭಾಗಿತ್ವದ ಯೋಜನೆಯಾಗಿದ್ದರಿಂದ ಪದೇ ಪದೇ ಯೋಜನೆಯ ಕಾರ್ಯವಿಧಾನ ಜಂಟಿ ಅರಣ್ಯ ಯೋಜನೆಯ ಆದೇಶಗಳ ದೋಷಗಳ ಬದಲಾವಣೆಗಾಗಿ ಸತತ ಪ್ರಯತ್ನ ನಡೆಯುತ್ತಿತ್ತು. ಆದರೆ ಇಲಾಖೆ ಇದಾವುದಕ್ಕೂ ಜಗ್ಗದೇ ಸಾಗಿತ್ತು. ಭತ್ತ ಹಾಗೂ ಇನ್ನಿತರ ಕೃಷಿ ಬೆಳೆ ಬೆಳೆದ ಬಡವರ ಭೂಮಿಗಳನ್ನು ಕಸಿದು ಅಲ್ಲಿ ಅಕೇಶಿಯಾ ನಾಟಿ ಮಾಡಿತು. ಇಡೀ ಯೋಜನೆಯ ಖರ್ಚು ವೆಚ್ಚಗಳೆಲ್ಲ ಯಾರಿಗೂ ತಿಳಿಯದಂತೆ ಗೌಪ್ಯವಾಗಿದ್ದವು. ರಾಜ್ಯ ಹಾಗೂ ದೇಶಮಟ್ಟದ ಬೇರೆ ಬೇರೆ ಪತ್ರಿಕೆಗಳಲ್ಲಿ ಲೇಖನ ಬರೆದು ಜನರಲ್ಲಿ ಜಾಗೃತಿವುಂಟುಮಾಡುವ ಕಾರ್ಯ ನಡೆಸಿದೆವು. ಬ್ರಿಟನ್ನಿನ ಏಕಾಲಾಜಿಸ್ಟ್ ಪತ್ರಿಕೆಯ ನಿಕೋಲಾಸ್ ಸಹಕಾರದಿಂದ ಧನಸಹಾಯ ನೀಡಿದ ಬ್ರಿಟನ್ ದೇಶದ ಮಾಧ್ಯಮಗಳಲ್ಲೂ ಯೋಜನೆಯ ದೋಷಗಳ ಕುರಿತು ಲೇಖನ ಪ್ರಕಟಿಸಲಾಯಿತು. ಇದಲ್ಲದೇ ತಾವು ಸ್ವತಃ ಬ್ರಿಟನ್ನಿಗೆ ತೆರಳಿ ಅಲ್ಲಿನ ಸಮೂಹ ಮಾಧ್ಯಮ, ದೂರದರ್ಶನಗಳಲ್ಲಿ ಈ ಬಗ್ಗೆ ವಿವರ ನೀಡಿದ್ದಾಗಿ ಪಾಂಡುರಂಗ ತಿಳಿಸಿದರು.

ಇವೆಲ್ಲದರ ಪರಿಣಾಮ ೧೯೯೭ರ ಜನವರಿ ೬ರಂದು ಶಿರಸಿಯಲ್ಲಿ ನಡೆದ ಕಾರ್ಯಾಗಾರದಲ್ಲಿ ಯೋಜನೆಯನ್ನು ತಜ್ಞರ ಸ್ವತಂತ್ರ ತಂಡದಿಂದ ಅಧ್ಯಯನ ನಡೆಸುವ ತೀರ್ಮಾನ ಮಾಡಲಾಯಿತು. ಅಧ್ಯಯನ ಯೋಜನೆಗೆ ರೂಪುರೇಷೆ ಮಾಡಲಾಯಿತು. ಸ್ವಯಂ ಸೇವಾ ಸಂಸ್ಥೆಗಳ, ಪರಿಸರ ಪ್ರೇಮಿಗಳ ಎರಡು ಮೂರು ವರ್ಷಗಳ ಹೋರಾಟಕ್ಕೆ ಮಹತ್ವದ ತಿರುವು ಈ ಅಧ್ಯಯನ ಯೋಜನೆ ಎಂದರು. ಎನ್. ಸಿ. ಸಕ್ಸೇನಾ ನಾಯಕತ್ವದ ತಜ್ಞರ ತಂಡ ಸತತ ಒಂದೂವರೆ ತಿಂಗಳುಗಳ ಕಾಲ ಜಿಲ್ಲೆಯಲ್ಲಿ ಸಂಚರಿಸಿದೆ, ಕ್ಷೇತ್ರಕಾರ್ಯ ನಡೆಸಿದೆ. ಗ್ರಾಮ ಅರಣ್ಯ ಸಮಿತಿ, ಸಾರ್ವಜನಿಕರು, ಸ್ವಯಂ ಸೇವಾ ಸಂಸ್ಥೆಗಳು, ಅಧಿಕಾರಿಗಳು ಮುಂತಾದವರನ್ನು ಭೇಟಿಯಾಗಿ ಅಧ್ಯಯನ ನಡೆಸಿದೆ. ದಾಖಲೆಗಳನ್ನು ಪರಿಶೀಲಿಸಿದೆ. ಈ ಎಲ್ಲ ಮಗ್ಗಲುಗಳಿಂದ ಅಧ್ಯಯನ ನಡೆಸಿದ ತಂಡ ೨೪೦ ಪುಟದ ಮಹತ್ವದ ವರದಿಯನ್ನು ಕಳೆದ ಮೇ ೧೯೯೭ರಲ್ಲಿ ಸರ್ಕಾರಕ್ಕೆ ನೀಡಿದೆ. ಇಡೀ ವರದಿ ಇಲಾಖೆಯ ದೋಷಪೂರ್ಣ ಕಾರ್ಯವೈಖರಿಗೆ ಕೈಗನ್ನಡಿಯಾಗಿದೆ. ಗ್ರಾಮ ಅರಣ್ಯ ಸಮಿತಿಗಳು ಇಲಾಖೆಯ ವಿಸ್ತರಣೆಯಾಗಿದೆಯೆಂದು ಪಶ್ಚಿಮಘಟ್ಟದ ಅಭಿವೃದ್ಧಿಗೆ ಬಂದ ಯೋಜನೆ ಕೇವಲ ಅರಣ್ಯ ನಶಿಸಿದ (೦.೨೫ ಮರದಟ್ಟನೆ ಪ್ರದೇಶ) ಅರಣ್ಯದಲ್ಲಿ ಮಾತ್ರ ಜನ ಸಹಭಾಗಿತ್ವಕ್ಕೆ ಅವಕಾಶ ನೀಡಿ ನೈಸರ್ಗಿಕ ಕಾಡಿನ ನಿರ್ಲಕ್ಷ್ಯ ಮಾಡಿದೆ ಎಂದು ವರದಿಯಲ್ಲಿ ಎತ್ತಿ ಹೇಳಲಾಗಿದೆ.

ಪಶ್ಚಿಮ ಘಟ್ಟದ ಸ್ವತಂತ್ರ ಅಧ್ಯಯನ ವರದಿ ಕಳೆದ ಮೇ ೧೯೯೭ರಲ್ಲಿ ಸರಕಾರಕ್ಕೆ ಸಲ್ಲಿಸಲ್ಪಟ್ಟಿದ್ದರೂ ಈವರೆಗೂ ವರದಿಯ ಸಲಹೆ ಶಿಫಾರಸ್ಸುಗಳ ಕುರಿತು ಯಾವುದೇ ರೀತಿಯಲ್ಲಿ ಇಲಾಖೆ ಹೆಜ್ಜೆಯಿಟ್ಟಿಲ್ಲ. ನೀತಿಯಲ್ಲಾಗಲೀ ಕಾರ್ಯರೂಪದಲ್ಲಾಗಲಿ ಬದಲಾವಣೆಗಳಿಲ್ಲ. ಈ ವರ್ಷ ಯೋಜನೆಯ ೮೦ ಕೋಟಿ ರೂಪಾಯಿ ಖರ್ಚಾಗಲಿದೆ. ಇದು ಕೇವಲ ೮೦ ಕೋಟಿ ರೂಪಾಯಿ ಯೋಜನೆ ಕತೆ. ಈಗ ಬಯಲುಸೀಮೆಯಲ್ಲಿ ಜಾರಿಯಾಗುತ್ತಿರುವುದು ೫೭೬.೫೫ ಕೋಟಿ ರೂಪಾಯಿಗಳ ಭಾರೀ ಯೋಜನೆ. ದೋಷಗಳನ್ನು ತುಂಬಿಕೊಂಡಿರುವ ಈ ಅರಣ್ಯೀಕರಣ ಯೋಜನೆಯ ಕುರಿತು ಈಗ ನಾವು ಚಿಂತಿಸುತ್ತಿರುವ ಹೊತ್ತಿಗೆ ಆಗಲೇ ೪೦ ಕೋಟಿ ರೂಪಾಯಿಗಳು ಖರ್ಚಾಗಿ ಹೋಗಿವೆ! ಇನ್ನುಳಿದ ಹಣವಾದರೂ ಸರಿಯಾಗಿ ವಿನಿಯೋಗವಾಗುವಂತೆ ನಾವೆಲ್ಲ ಲಕ್ಷ್ಯಹರಿಸಬೇಕಾಗಿದೆ. ಸ್ವಯಂ ಸೇವಾ ಸಂಸ್ಥೆಗಳನ್ನೂ, ಹಳ್ಳಿಗರನ್ನು ಅಲಕ್ಷ್ಯಿಸಿ ಸಾಗಿದ ಯೋಜನೆಯ ದೋಷಗಳ ಬಗ್ಗೆ ಜನರನ್ನು ಜಾಗೃತ ಪಡಿಸಬೇಕು ಎಂದು ಪಾಂಡುರಂಗ ಹೆಗಡೆ ಈ ಸಂದರ್ಭದಲ್ಲಿ ವಿನಂತಿಸಿಕೊಂಡರು.

# ಉತ್ತರ ಕನ್ನಡದಲ್ಲಿ ಜನಸಹಭಾಗಿತ್ವ ಯೋಜನೆ

- ಸುದರ್ಶನ್ ಮಳಗಿ

ಜನ ಸಹಭಾಗಿತ್ವದ ಯೋಜನೆಯ ಬಗೆಗೆ ಮಳಗಿಯ 'ವಿಕಾಸ' ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸುದರ್ಶನ್ ಮಾಹಿತಿ ಒದಗಿಸಿದರು. ಹಳ್ಳಿಯ ನೈಸರ್ಗಿಕ ಸಂಪತ್ತಿನ ನಿರ್ವಹಣೆಯನ್ನು ಅಧಿಕಾರಿಗಳು ಮಾಡುವುದರ ಬದಲು ಹಳ್ಳಿಗನೇ ಹೊಣೆ ಹೊರುವ ಕಲ್ಪನೆಯಿದು. ಹಳ್ಳಿಯ ಕಾಡಿನ ಸಂರಕ್ಷಣೆ, ಅಭಿವೃದ್ಧಿಯ ನೇರ ಲಾಭ ಹಳ್ಳಿಗರಿಗೆ ಸಂಬಂಧಿಸಿದ್ದಾದರೂ ಇಷ್ಟು ವರ್ಷ ಇಲಾಖೆ ಸಸಿ ನೆಟ್ಟು ಹಳ್ಳಿಗರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಅರಣ್ಯೀಕರಣ ಸಾಗಿತ್ತು. ೧೯೮೮ರ ರಾಷ್ಟ್ರೀಯ ಅರಣ್ಯ ನೀತಿ ಅರಣ್ಯಾಭಿವೃದ್ಧಿಯಲ್ಲಿ ಜನ ಪಾಲ್ಗೊಳ್ಳಬೇಕು ಎಂಬ ವಿಚಾರಕ್ಕೆ ಮಹತ್ವ ನೀಡಿತು. ಇದೇ ರೀತಿ ಕರ್ನಾಟಕ ಕೂಡಾ ೧೯೯೩ರಲ್ಲಿ ಜಂಟಿ ಅರಣ್ಯ ಯೋಜನೆ ಹಾಗೂ ನಿರ್ವಹಣೆ ಯೋಜನೆ ಆರಂಭಿಸಿತು. ಇಲ್ಲಿ 'ಜಂಟಿ' ಎಂದರೆ ಕರ್ನಾಟಕ ಅರಣ್ಯ ಇಲಾಖೆ ಹಾಗೂ ಗ್ರಾಮಸ್ಥರು. ಯೋಜನೆಯನ್ನು ರೂಪಿಸುವುದು ಹಾಗೂ ನಿರ್ವಹಿಸುವ ಜವಾಬ್ದಾರಿ ಹಳ್ಳಿಗರಿಗೆ ಹಾಗೂ ಅರಣ್ಯ ಇಲಾಖೆ ಕೂಡಿ ಮಾಡಬೇಕು ಎಂಬುದು ಯೋಜನೆಯ ಉದ್ದೇಶವಾಗಿದೆ.

ಅರಣ್ಯ ನಿರ್ವಹಣೆಗಾಗಿ ಹಳ್ಳಿಗಳಲ್ಲಿ ಅರಣ್ಯ ಸಮಿತಿ ರಚನೆಯಾಗುತ್ತದೆ. ಗ್ರಾಮದ ಪ್ರತಿ ಕುಟುಂಬದ ಓರ್ವ ವ್ಯಕ್ತಿ ಈ ಸಮಿತಿಯ ಸದಸ್ಯರಾಗಿರುವರು. ಸದಸ್ಯರೆಲ್ಲ ಸೇರಿ ಆಡಳಿತ ಮಂಡಳಿ ಆರಿಸುವರು. ಈ ಆಡಳಿತ ಮಂಡಳಿಯಲ್ಲಿ ಗ್ರಾಮದ ವಿವಿಧ ವರ್ಗದವರಿಗೆ ಪ್ರಾತಿನಿಧ್ಯ ನೀಡುವರು. ನಿರ್ವಹಣಾ ಸಮಿತಿ ತನ್ನ ಅಧ್ಯಕ್ಷರನ್ನು ಆರಿಸುವುದು. ಸಮಿತಿಯ ಅಧ್ಯಕ್ಷ ಹಳ್ಳಿಗರಾಗಿರುವರು. ಆದರೆ ಕಾರ್ಯದರ್ಶಿ ವನಪಾಲಕರಾಗಬೇಕೆಂಬ ನಿಯಮವಿದೆ. ಈ ಆಧಾರದ ಮೇಲೆ ರಾಜ್ಯದ ಉತ್ತರ ಕನ್ನಡ ಜಿಲ್ಲೆಯಲ್ಲಿ ಪಶ್ಚಿಮಘಟ್ಟ ಅರಣ್ಯಾಭಿವೃದ್ಧಿ ಯೋಜನೆಯಲ್ಲಿ ೨೨೦ಕ್ಕೂ ಹೆಚ್ಚು ಸಮಿತಿಗಳು ರಚನೆಯಾಗಿವೆ. ಹಳ್ಳಿಯ ಕಾಡಿನ ರಕ್ಷಣೆ, ಬೆಂಕಿಯಿಂದ ಅರಣ್ಯ ಸಂರಕ್ಷಣೆ, ಅಕ್ರಮ ಕಟಾವು ತಡೆಯುವ ಕಾರ್ಯಗಳಲ್ಲಿ ಇವು ಭಾಗಿಯಾಗುತ್ತವೆ. ಸ್ವಯಂ ಸೇವಾ ಸಂಸ್ಥೆಗಳು ಸಮಿತಿಗಳಿಗೆ ಈ ಯೋಜನೆ ಬಗ್ಗೆ ಶಿಕ್ಷಣ, ಮಾರ್ಗದರ್ಶನ ಮಾಡುತ್ತ ಇವು ಉತ್ತಮವಾಗಿ ಕಾರ್ಯ ನಿರ್ವಹಿಸಲು ಕಾರಣವಾಗಿವೆ ಎಂದು ಸುದರ್ಶನ್ ತಿಳಿಸಿದರು.

••• ••• •••

# ನಲ್ಲೂರಿನ ಕಾಡಿನ ಧ್ವಂಸಕ್ಕೆ ಎಂ. ಪಿ. ಎಂ. ಬುಲ್ಡೋಜರ್!

-- ಮಹೇಂದ್ರ ಕುಮಾರ್

ಉತ್ತರ ಕನ್ನಡದಲ್ಲಿ ಪಶ್ಚಿಮಘಟ್ಟ ಅರಣ್ಯಾಭಿವೃದ್ಧಿ ಯೋಜನೆಯ ಗತಿ ವಿವರಿಸಿದ್ದಾಗಿತ್ತು. ಈಗ ಶಿವಮೊಗ್ಗದಲ್ಲಿ ಇದೇ ಯೋಜನೆ ಆರಂಭವಾಗಿದೆ. 'ಅಲ್ಲೇನಾಗಿದೆ?' ಎಂಬ ಕುತೂಹಲ ಕಾರ್ಯಾಗಾರದಲ್ಲಿ ಸಹಜವಾಗಿ ವ್ಯಕ್ತವಾಗಿತ್ತು. ಚಿಕ್ಕಮಗಳೂರಿನ ಗ್ರೀನ್ ಇಂಡಿಯಾ ಟ್ರಸ್ಟ್‌ನ ಮಹೇಂದ್ರ ಕುಮಾರ್ ತಮ್ಮ ಮಾತಿನಲ್ಲಿ ಭದ್ರಾವತಿಯ ಜೀವವೈವಿಧ್ಯದ ಧ್ವಂಸಕಾಂಡದತ್ತ ಎಲ್ಲರ ಗಮನ ಸೆಳೆದರು. ಭದ್ರಾವತಿ ವಿಭಾಗದ ನಲ್ಲೂರು ವಲಯದ ಕೆ. ಎಸ್. ಗಾಣದ ಕಟ್ಟೆ ಎಂಬಲ್ಲಿ ಸರ್ವೆ ನಂ.೧೮ರಲ್ಲಿ ೮೦೦ಎಕರೆ ಕಾಡಿದೆ. ಶ್ರೀಗಂಧ, ಸಾಗುವಾನಿಯಂತಹ ಅಮೂಲ್ಯ ಮರಗಳಿಂದ ಕಾಡು ಸಮೃದ್ಧವಾಗಿದೆ. ಈ ಅರಣ್ಯವನ್ನು ಮೈಸೂರು ಪೇಪರ್ ಮಿಲ್ಸ್ (ಎಂ. ಪಿ. ಎಂ.) ನವರಿಗೆ ಕರ್ನಾಟಕ ಅರಣ್ಯ ಇಲಾಖೆ ನೀಲಗಿರಿ ಬೆಳೆಸಲು ನೀಡಿದೆ. ಈಗಾಗಲೇ ೨೫೦ ಎಕರೆ ಪ್ರದೇಶದಲ್ಲಿ ಬುಲ್ಡೋಜರ್ ಬಳಸಿ ಸಂಪೂರ್ಣ ಸಸ್ಯ ಸಂಕುಲವನ್ನು ಎಂ. ಪಿ. ಎಂ. ನಾಶಮಾಡಿದೆ. ಇಲ್ಲಿನ ಗ್ರಾಮಸ್ಥರು ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಸೇರಿ ಫೆಬ್ರುವರಿ ೮ರಂದು ಪ್ರತಿಭಟನೆ ನಡೆಸಿವೆ. ನೀಲಗಿರಿ, ಅಕೇಶಿಯಾ ಗಿಡ ನೆಡದಂತೆ ಮತ್ತೆ ಬುಲ್ಡೋಜರ್ ಬಳಸದಂತೆ ಎಚ್ಚರಿಕೆ ನೀಡಿವೆ. ಇಲ್ಲಿನ ೫೦ರಷ್ಟು ಜನ ಈ ಕಾಡಿನ ಹಣ್ಣು ಹಂಪಲು ಸಂಗ್ರಹಿಸಿ ಬದುಕುತ್ತಿದ್ದರು. ಇದಾವುದನ್ನೂ ಲಕ್ಷ್ಯಸದೇ ಬುಲ್ಡೋಜರ್ ಎಲ್ಲವನ್ನೂ ನಾಶಮಾಡಿದೆ! ಜನ ವಿರೋಧಿಸಿದಾಗ ರಾತ್ರಿ ಬುಲ್ಡೋಜ್ ಮಾಡಲಾಗಿದೆ. ಹಳ್ಳಿಗರ ಹೋರಾಟದ ದಿಕ್ಕು ತಪ್ಪಿಸುವ ಪ್ರಯತ್ನಗಳೂ ಇಲ್ಲಿ ನಡೆದಿವೆ. ಜನ ಯಾವುದಕ್ಕೂ ಬಗ್ಗದೇ 'ಈ ಬುಲ್ಡೋಜ್ ಮಾಡಿದ ಪ್ರದೇಶವನ್ನು ಮೊದಲಿನ ಸ್ಥಿತಿಗೆ ಹೇಗೆ ಸುಧಾರಿಸಿಕೊಡುತ್ತೀರಿ?' ಎಂದು ಮಹಿಳೆಯರು ಪ್ರಶ್ನೆ ಹಾಕಿದ್ದಾರೆ. ಈ ಬಗ್ಗೆ ಫೆವಾರ್ಡ್ ಕೆ.ಯ ಎಸ್. ಆರ್. ಹಿರೇಮಠ ಹಾಗೂ ಬೆಂಗಳೂರಿನ ಅರಣ್ಯಾಧಿಕಾರಿ ದಿಲೀಪ್‌ರೆದುರು ಚರ್ಚಿಸಿದ್ದೇವೆ. ಬಹುಶಃ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧಕ್ರಮ ಜರುಗಿಸುವ ನಿರೀಕ್ಷೆಯಿದೆ. ಈಗ ಕೆಲಸ ನಿಂತಿದೆ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ವಿಭಾಗದಲ್ಲಿ ಅತಿ ಹೆಚ್ಚಿನ ಅರಣ್ಯ ಸಮಿತಿಗಳನ್ನು ಇಲಾಖೆ ರಚಿಸಿದೆ. ಪಶ್ಚಿಮಘಟ್ಟ ಅಭಿವೃದ್ಧಿ ಯೋಜನ 'ಡಿಸೈನ್ ಕಮಿಟಿ'ಗಳು ಶಿವಮೊಗ್ಗದಲ್ಲಿ ಸಭೆ ನಡೆಸುತ್ತಿವೆ. ಇಂತಹ ಸಂದರ್ಭದಲ್ಲೆ ಬುಲ್ಡೋಜರ್ ಬಳಸಿ ಜೀವವೈವಿಧ್ಯತೆಯ ನಾಶ ಸಾಗಿದೆ. ಇಲ್ಲಿ ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆಯ ಸಭೆಗಳು ಜನಸಹಭಾಗಿತ್ವದ ಸಭೆಗಳಾಗಿಲ್ಲ. ಜನರ ಜೊತೆ ಕೂಡಿ ಕೆಲಸ ಮಾಡುವ ಸ್ವಯಂ ಸೇವಾ ಸಂಸ್ಥೆಗಳನ್ನು ಇಲಾಖೆ ದೂರಿಟ್ಟಿದೆ. ಇಲಾಖೆಯ ಜೊತೆ ಎಲ್ಲ ರೀತಿಯಿಂದ ಸಹಕರಿಸುವ ಸ್ವಯಂ ಸೇವಾ ಸಂಸ್ಥೆಗಳಿಗೆ ಮಾತ್ರ ಇಲಾಖೆ ಹತ್ತಿರಕ್ಕೆ ತೆಗೆದುಕೊಂಡಿದೆ. ಶಿವಮೊಗ್ಗ ಜಿಲ್ಲೆಯ ೧೧ತಾಲೂಕುಗಳ ೫೪ಹಳ್ಳಿಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಕೆಲಸ ಮಾಡುತ್ತಿವೆ. ಸಂಸ್ಥೆಗಳು ಅರಣ್ಯ ಇಲಾಖೆಗೆ ಬರೆದ ಪತ್ರಗಳಿಗೆ ಉತ್ತರ ಬರುತ್ತಿಲ್ಲ. ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಒಟ್ಟು ೩೧ ಸ್ವಯಂ ಸೇವಾ ಸಂಸ್ಥೆಗಳು ಕೆಲಸ ಮಾಡುತ್ತಿವೆ. ಅರಣ್ಯ ಸಮಿತಿ ಶಿವಮೊಗ್ಗದಲ್ಲಿ ರಚನೆಯಾಗುವಾಗ ಒಂದು ಹಳ್ಳಿಯಲ್ಲಂತೂ ಪೋಲಿಸರ ಬಿಗಿ ಬಂದೋವಸ್ತನ್ನು ಇಲಾಖೆ ಬಳಸಿದೆ ಎಂದು ಮಹೇಂದ್ರ ಕುಮಾರ್ ಹೇಳಿದರು.

••• ••• •••

# ಹಸಿರು ಸಾಲದ ಯೋಜನೆ

- ಶಿವಾನಂದ ಕಳವೆ

ಪೂರ್ವ ವಲಯ ಅರಣ್ಯ ಹಾಗೂ ಪರಿಸರ ಯೋಜನೆಯ ಮಹತ್ವಗಳ ಬಗೆಗೆ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳಿಗೆ ಪರಿಸರ ಬರಹಗಾರ ಶ್ರೀ ಶಿವಾನಂದ ಕಳವೆ ವಿವರ ನೀಡಿದರು.

ಜಪಾನ್ ದೇಶದಿಂದ ಸಾಲ ತಂದು ಹಸಿರು ಬೆಳೆವ ಯೋಜನೆ ಇದು. ಬಯಲುಸೀಮೆ ನಿತ್ಯ ಕುಡಿವ ನೀರಿಗಾಗಿ, ಬದುಕಿನ ಆಸರೆಯಾದ ಕೃಷಿ ನೀರಾವರಿಗಾಗಿ ಬಿಸಿಲಲ್ಲಿ ಕಾಯುತ್ತಿದೆ. ಮರ, ಗಿಡ ಬೆಳೆಸಿ ಪರಿಸರ ಸುಧಾರಿಸದಿದ್ದರೆ ಈ ಪ್ರದೇಶಗಳ ಜನ ಜೀವನ, ಕೃಷಿ ಬದುಕು ತೀವ್ರ ಆತಂಕಕ್ಕೆ ಒಳಗಾಗಬಹುದು. ಭವಿಷ್ಯದ ಈ ಭಯದ ಅರಿವಿನಿಂದ ವ್ಯಾಪಕ ಅರಣ್ಯೀಕರಣಕ್ಕೆ ಕರ್ನಾಟಕ ಅರಣ್ಯ ಇಲಾಖೆ ಹೆಜ್ಜೆಯಿರಿಸಿದ್ದರ ಬಗ್ಗೆ ಮೆಚ್ಚುಗೆಯ ಮಾತಾಡಿದರು. ಬಯಲುಸೀಮೆಯ ೧೭ ಜಿಲ್ಲೆಗಳ ೧೩೪ ತಾಲ್ಲೂಕುಗಳಲ್ಲಿ ಜಾರಿಯಾಗಲಿರುವ ಈ ಯೋಜನೆಗಾಗಿ ೫೬೬.೫೫ ಕೋಟಿ ರೂಪಾಯಿಯ ಸಾಲದ ಹಣ ವಿನಿಯೋಗವಾಗಲಿದೆ. ಹಳ್ಳಿಗರು ತಮ್ಮ ಸಾಂಪ್ರದಾಯಿಕ ಜ್ಞಾನದಿಂದ ಕಾಡು ಬೆಳೆಸಿದ ಅತ್ಯುತ್ತಮ ನಿದರ್ಶನಗಳು ಬಯಲು ಸೀಮೆಗಳಲ್ಲಿವೆ. ಯಾವ ಗಿಡ ನೆಡದೇ ಕೇವಲ ರಕ್ಷಣೆ ಮಾತ್ರದಿಂದ ಸಾವಿರ ಎಕರೆ ಕಾಡು ಬೆಳೆಸಿದ ಉದಾಹರಣೆ ಜಮಖಂಡಿ ತಾಲೂಕಿನ ಕಲ್ಲಳ್ಳಿಯಲ್ಲಿದೆ. ಒಂದು ರೂಪಾಯಿ ಖರ್ಚುಮಾಡದೇ ಹಳ್ಳಿಗರೇ ಒಗ್ಗಟ್ಟಿನಿಂದ ಮಾಡಿದ ಈ ಅದ್ಭುತ ಕಾರ್ಯದ ಯಶಸ್ಸು ಕೇವಲ ಹಣ ಮಾತ್ರದಿಂದ ಕಾಡು ಬೆಳೆಸಬಹುದೆಂಬ ತೀರ್ಮಾನಗಳಿಗೆ ವಿರುದ್ಧವಾಗಿದೆ. ೧೯೮೮ ರಾಷ್ಟ್ರೀಯ ಅರಣ್ಯ ನೀತಿ ಜನಸಹಭಾಗಿತ್ವದ ಅರಣ್ಯಾಭಿವೃದ್ಧಿಗೆ ಮಹತ್ವ ನೀಡಿದೆ. ೧೯೯೩ರ ಕರ್ನಾಟಕ ಜಂಟಿ ಅರಣ್ಯ ಯೋಜನೆ ಜನಸಹಭಾಗಿತ್ವದ ಕಲ್ಪನೆ ಹೊತ್ತಿದೆ. ವಸ್ತುಸ್ಥಿತಿ ಹೀಗಿರುವಾಗ ೫೬೬.೫೫ ಕೋಟಿ ರೂಪಾಯಿಯಲ್ಲಿ ಬಯಲು ಸೀಮೆಯಲ್ಲಿ ಅರಣ್ಯ ಬೆಳೆಸಲು ಹೊರಟ ಕರ್ನಾಟಕ ಅರಣ್ಯ ಇಲಾಖೆ ಯೋಜನೆಗಳಲ್ಲಿ ಜನಸಹಭಾಗಿತ್ವಕ್ಕೆ ಸರಿಯಾದ ಅವಕಾಶ ಒದಗಿಸಿಲ್ಲ. ಜನರನ್ನು ದೂರಿಟ್ಟು ಈ ಯೋಜನೆ ಕಾರ್ಯಗತವಾದರೆ ಇದು ಬಯಲುಸೀಮೆಯಲ್ಲಿ ಹಸಿರು ಬೆಳೆಸುವ ಯೋಜನೆಯಾಗದೇ ವಿದೇಶಿ ಸಾಲ ಬೆಳೆಸುವ ಯೋಜನೆಯಾಗುವುದರಲ್ಲಿ ಸಂಶಯವೇ ಇಲ್ಲ ಎಂದರು.

ಯೋಜನೆಯು ಈ ಜಿಲ್ಲೆಗಳ ೪.೭೦.೫೦೦ ಹೆಕ್ಟೇರ್ ಪ್ರದೇಶಗಳಲ್ಲಿ ಗಿಡ ಬೆಳೆಸುವುದು. ಮಣ್ಣು, ನೀರಿನ ಸಂರಕ್ಷಣೆ ಮಾಡುವ ಉದ್ದೇಶ ಹೊಂದಿದೆ. ಯೋಜನೆ ಪ್ರಧಾನವಾಗಿ ೩ಲಕ್ಷ ಹೆಕ್ಟೇರ್ ಪ್ರದೇಶದ ಖಾಸಗಿ ಕೃಷಿ ಭೂಮಿಗಳಲ್ಲಿ ೨೧ ಕೋಟಿ ಸಸಿ ನೆಡಲು ಇಚ್ಚಿಸಿದೆ. ರೈತರಿಗೆ ಸಸಿಗಳನ್ನು ಹತ್ತಿರದ ಗ್ರಾಮ ಪಂಚಾಯಿತಿಗಳಿಂದ ಇಲಾಖೆ ಮಾರಲಿದೆ. ೦.೬೦ ಪೈಸೆಯಿಂದ ರೂ. ೧೬.೫೦ವರೆಗೂ ಪ್ರತಿ ಸಸಿಗೆ ವೆಚ್ಚವನ್ನು ಕೃಷಿಕರು ನೀಡಬೇಕಾಗುತ್ತದೆ. ಇದಲ್ಲದೇ ಕಾಯ್ದಿಟ್ಟ ಅರಣ್ಯ ಪ್ರದೇಶ, ಕಾಯ್ದಿಟ್ಟ ಅರಣ್ಯ ನಶಿಸಿದ ಪ್ರದೇಶ, ರಸ್ತೆ, ಕೆರೆ, ರೇಲ್ವೆ ಹಳಿಗಳ ಪಕ್ಕದಲ್ಲಿ ಗಿಡ ನೆಡುವ ಉದ್ದೇಶ ಹೊಂದಲಾಗಿದೆ. ಬೆಂಕಿ, ಅಕ್ರಮ ಕಡಿತಗಳಿಂದ ಅರಣ್ಯಗಳನ್ನು ಸಂರಕ್ಷಿಸುವ ಕಾರ್ಯ ನಡೆಯುತ್ತದೆ. ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ, ಕೆರೆ, ಸರೋವರ, ನಗರ ಉದ್ಯಾನಗಳ ಅಭಿವೃದ್ಧಿಗೂ ಹಣ ಖರ್ಚಾಗಲಿದೆ. ಒಟ್ಟು ೧.೭೦.೫೦೦ ಹೆಕ್ಟೇರ್ ಪ್ರದೇಶದ ಕಾಯ್ದಿಟ್ಟ ಅರಣ್ಯ ಹಾಗೂ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದ ಭೂಮಿಗಳಲ್ಲಿ ಗಿಡ ಬೆಳೆಸಲು ಇಲಾಖೆ ಉತ್ಸುಕವಾಗಿದೆ ಎಂದರು.

ಜಪಾನಿನ ಸಾಗರೋತ್ತರ ಸಹಕಾರ ನಿಧಿಯಿಂದ ಪಡೆದ ಸಾಲದ ಹಣದಿಂದ ಯೋಜನೆ ರೂಪುಗೊಂಡಿದೆ. ಜಪಾನ್ ೫೦೮.೫೪ ಕೋಟಿ ರೂಪಾಯಿಗಳನ್ನು ಭಾರತ ಸರಕಾರಕ್ಕೆ ೨.೧೦ ಪ್ರತಿಶತ ಬಡ್ಡಿದರದಲ್ಲಿ ಸಾಲ ನೀಡಿದೆ. ಈ ಹಣವನ್ನು ಕೇಂದ್ರ ಸರಕಾರ ಕರ್ನಾಟಕದ ಬಯಲುಸೀಮೆ ಅರಣ್ಯೀಕರಣಕ್ಕೆ ಪ್ರತಿಶತ ೧೨ರ ಬಡ್ಡಿದರದಲ್ಲಿ ಸಾಲ ನೀಡುತ್ತಿದೆ. ಭಾರತ ಸರಕಾರವು ಕರ್ನಾಟಕಕ್ಕೆ ನೀಡುವ ೫೦೮.೫೪ ಕೋಟಿ ರೂಪಾಯಿಗಳ ಪೈಕಿ ೬೦ರಷ್ಟು ಹಣ ಸಾಲವಾಗಿದ್ದು ಇನ್ನುಳಿದ ೪೦ರಷ್ಟು ಹಣ ಸಹಾಯಧನವಾಗಿದೆ. ಕರ್ನಾಟಕ ಸರಕಾರ ಕೂಡಾ ೫೮.೦೧ ಕೋಟಿ ರೂಪಾಯಿಗಳನ್ನು ಈ ಯೋಜನೆಗಾಗಿ ತೊಡಗಿಸುತ್ತಿದೆ. ಯೋಜನೆ ೧೯೯೬-೯೭ರಿಂದಲೇ ಆರಂಭವಾಗಿದ್ದು ೨೦೦೧-೦೨ರ ವೇಳೆಗೆ ಮುಗಿಯಲಿದೆ. ಈ ಸಾಲದ ಹಣವನ್ನು ಮುಂದಿನ ೩೦ವರ್ಷಗಳ ಅವಧಿಯಲ್ಲಿ ತೀರಿಸಬೇಕಾಗಿದ್ದು ಯೋಜನೆ ಆರಂಭವಾದ ೧೧ನೇ ವರ್ಷದಿಂದ ಮರು ಪಾವತಿ ಆರಂಭವಾಗಬೇಕಾಗಿದೆ.

ಯೋಜನೆಯ ಮೂಲ ಉದ್ದೇಶ ಇಲಾಖೆಯೇ ಹೇಳಿಕೊಂಡ ಪ್ರಕಾರ ಇಂತಿದೆ. ಅರಣ್ಯ ಬೆಳೆಸುವಲ್ಲಿ ಜನರ ಸಹಭಾಗಿತ್ವ ಪಡೆಯುವುದು. ಈ ಕಾರ್ಯಗಳಲ್ಲಿ ಭಾಗಿಯಾದ ಗ್ರಾಮಸ್ಥರಿಗೆ ಅರಣ್ಯದ ಅಂತಿಮ ಉತ್ಪನ್ನದಲ್ಲಿ ಪಾಲು ನೀಡುವುದು. ಸಮುದಾಯ ಹಾಗೂ ಖಾಸಗಿ ಹಿಡಿತದಲ್ಲಿರುವ ಭೂಮಿಗಳಲ್ಲಿ ಗಿಡ, ಮರ ಬೆಳೆಸಲು ಕೃಷಿ ಅರಣ್ಯ ವಿಧಾನಗಳನ್ನು ಅಳವಡಿಸುವುದು ಇದರಿಂದ ಉತ್ಪನ್ನ ಪಡೆಯುವುದರ ಜೊತೆಗೆ ಅರಣ್ಯಗಳ ನಿರಂತರ ಪೋಷಣೆ ಮಾಡುವುದು. ಜನರಿಗೆ ಖಾಯಂ ಹಾಗೂ ತಾತ್ಕಾಲಿಕ ಉದ್ಯೋಗಾವಕಾಶಗಳನ್ನು ಕಲ್ಪಿಸುವುದು. ಕಡು ಬಡವರಿಗೆ ಜೀವನೋಪಾಯಕ್ಕಾಗಿ ಅವಕಾಶ ಒದಗಿಸುವುದು. ಇದಲ್ಲದೇ ಹೇರಳ ಪ್ರಮಾಣದಲ್ಲಿ ಸಸಿ ನೆಡುವುದರ ಮೂಲಕ ಪರಿಸರ ಸಮತೋಲನ ಕಾಯ್ದುಕೊಳ್ಳಲು ಪ್ರಯತ್ನಿಸುವ ಉದ್ದೇಶವೂ ಇದೆ. ಈ ಯೋಜನೆಯಲ್ಲಿ ವಿವಿಧ ಜಾತಿಯ ಸಸಿಗಳನ್ನು ಬೆಳೆಸಿ ಅರಣ್ಯದ

ಉತ್ಪಾದಕ ಶಕ್ತಿಯನ್ನು ಹೆಚ್ಚಿಸುವ ಗುರಿಯಿದೆ. ಇದಕ್ಕೆ ಪೂರಕವಾಗಿ ಫಲವತ್ತಾದ ಮಣ್ಣಿನ ರಕ್ಷಣೆ, ಅಂತರಜಲಮಟ್ಟದ ಹೆಚ್ಚಳಕ್ಕಾಗಿ ಮಳೆ ನೀರಿನ ಸಂಗ್ರಹಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಜೀವವೈವಿಧ್ಯತೆಯಿಂದ ಸಂಪದ್ಭರಿತವಾದ ಹಾಗೂ ವನ್ಯ ಜೀವಿಗಳ ಆಶ್ರಯತಾಣಗಳ ಸಂರಕ್ಷಣೆ ಅತ್ಯಂತ ಕಡಿಮೆ ಅವಧಿಯಲ್ಲಿ ಶೀಘ್ರವಾಗಿ ಅರಣ್ಯ ಅಭಿವೃದ್ಧಿ ಪಡಿಸುವ ವಿಧಾನಗಳನ್ನು ಕಾರ್ಯರೂಪಕ್ಕೆ ತರುವುದು. ದನಕರುಗಳಿಗೆ ಮೇವು, ಗೊಬ್ಬರ, ಉರುವಲು, ಸಣ್ಣನಾಟಾಗಳನ್ನು ನೀಡುವ ಜಾತಿಗಳ ಸಸ್ಯಗಳನ್ನು ಬೆಳೆಸುವ ರೈತರನ್ನು ಹುರಿದುಂಬಿಸುವುದು. ವೈಜ್ಞಾನಿಕ ಕ್ರಮದಲ್ಲಿ ಭೂಮಿಯ ಸಂಪನ್ಮೂಲಗಳ ಬಳಕೆ ಆಧರಿಸಿ ಹಳ್ಳಿಗಳಲ್ಲಿ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಗುರಿಯನ್ನೂ ಹೊಂದಲಾಗಿದೆ.

ಯೋಜನಾ ಕ್ಷೇತ್ರವನ್ನು ಐದು ಪ್ರದೇಶ (Zone)ಗಳಾಗಿ ವಿಂಗಡಿಸಲಾಗಿದೆ. (೧) ಐತಿಹಾಸಿಕವಾಗಿ ಮಹತ್ವ ಪಡೆದ, ಹೆಚ್ಚು ಮರಗಿಡಗಳನ್ನು ಹೊಂದಿದ ಸೂಕ್ಷ್ಮ ಪರಿಸರ ಹಾಗೂ ವನ್ಯಜೀವಿಗಳ ಆಶ್ರಯತಾಣ. ಇದರಲ್ಲಿ ಯೋಜನೆಯ ಆದ್ಯತೆ ಪರಿಸರದ್ದಾಗಿದ್ದು, ಯೋಜನೆಯ ಅವಧಿಯಲ್ಲಿ ಈ ಪ್ರದೇಶಕ್ಕೆ ಸಂಬಂಧಿಸಿದ ೨೦.೦೦೦ಹೆಕ್ಟೇರ್ ಅರಣ್ಯವನ್ನು ಅಭಿವೃದ್ಧಿ ಪಡಿಸಲಾಗುತ್ತದೆ. (೨) ಕಾಯ್ದಿಟ್ಟ ಅರಣ್ಯಗಳು ನಾಶವಾದ ಪ್ರದೇಶದಲ್ಲಿ ಪರಿಸರ ಹಾಗೂ ಆರ್ಥಿಕತೆ (ಹೆಚ್ಚು ಲಾಭ)ಗೆ ಸಂಬಂಧಿಸಿ ಅರಣ್ಯೀಕರಣ ನಡೆಯಲಿದೆ. ೮೦.೦೦೦ ಹೆಕ್ಟೇರ್ ಪ್ರದೇಶವನ್ನು ಇಲ್ಲಿ ಅಭಿವೃದ್ಧಿ ಪಡಿಸಲಾಗುತ್ತದೆ. (೩) ಕಾಯ್ದಿಟ್ಟ ಅರಣ್ಯಗಳು ನಾಶವಾದ ೪೬.೦೦೦ ಹೆಕ್ಟೇರ್ ಪ್ರದೇಶದಲ್ಲಿ ಆರ್ಥಿಕವಾಗಿ ಲಾಭದಾಯಕವಾಗಬಲ್ಲ ಹಾಗೂ ಸ್ಥಳೀಯ ಜನರ ಅಗತ್ಯ ಪೂರೈಸುವ ಮಾದರಿಯಲ್ಲಿ ಈ ಪ್ರದೇಶದ ಅಭಿವೃದ್ಧಿ ಮಾಡಲಾಗುವುದು. ಈ ಪ್ರದೇಶಗಳ ಅರಣ್ಯೀಕರಣದಲ್ಲಿ ಐದು ಮಾದರಿಯ ನಡೆತೋಪುಗಳನ್ನು ಬೆಳೆಸಲಿದ್ದು, ನೀರಾವರಿ ಮುಖೇನ ಬಿದಿರು, ತೇಗ ಹಣ್ಣು ಹಂಪಲಿನ ತೋಟ ಬೆಳೆಸುವದೂ ಇದರಲ್ಲಿ ಸೇರಿದೆ. (೪) ಕಾಯ್ದಿಟ್ಟ ಅರಣ್ಯಗಳ ಹೊರಭಾಗದ ಬಯಲು ಪ್ರದೇಶದಲ್ಲಿ ಹೆಚ್ಚು ಲಾಭದಾಯಕವಾಗಬಲ್ಲ ಸ್ಥಳೀಯ ಜನರ ಅಗತ್ಯ ಪೂರೈಸಬಲ್ಲ ಗಿಡ ಬೆಳೆಸಲಾಗುತ್ತಿದ್ದು ೨೪.೫೦೦ ಹೆಕ್ಟೇರ್ ಈ ಪ್ರದೇಶದಲ್ಲಿ ಬರುತ್ತದೆ. ಇದಲ್ಲದೇ ಗೋಮಾಳ, ಕೆರೆದಂಡೆ, ರಸ್ತೆ, ಕಾಲುವೆ, ರೇಲ್ವೆ ಹಳಿಯ ಪಕ್ಕದಲ್ಲಿನ ಸರಕಾರಿ ಭೂಮಿಗಳಲ್ಲಿ ಗಿಡ ನೆಡುವುದು ಈ ಪ್ರದೇಶದ ವ್ಯಾಪ್ತಿಗೆ ಸೇರಿದೆ. (೫) ಖಾಸಗಿ ಕೃಷಿ ಭೂಮಿಯಲ್ಲಿ ಆರ್ಥಿಕವಾಗಿ ಸಹಾಯಕವಾಗಬಲ್ಲ ಹಾಗೂ ಸ್ಥಳೀಯ ಕೃಷಿಯ ಅಗತ್ಯತೆ ಪೂರೈಸಬಲ್ಲ ಗಿಡಗಳ ಅಭಿವೃದ್ಧಿಯನ್ನು ೩ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾಡಲಾಗುತ್ತದೆ. ೨೧ಕೋಟಿ ಸಸಿ ನೆಡಲಾಗುತ್ತದೆ. ಇಲ್ಲಿ ಎರಡು ಮಾದರಿಗಳನ್ನು ಅಳವಡಿಸಲಾಗಿದೆ. ಒಂದು ಹೆಕ್ಟೇರಿಗೆ ೧೦೦ ಸಸಿಗಳಂತೆ ಒಂದು ಕೋಟಿ ಸಸಿಗಳನ್ನು ಕೃಷಿಕರಿಗೆ ಹಂಚಲಾಗುತ್ತದೆ. ಇನ್ನೊಂದು ಮಾದರಿಯನ್ವಯ ಹೆಕ್ಟೇರಿಗೆ ಒಂದು ಸಾವಿರ ಸಸಿಗಳನ್ನು ನೀಡಲಾಗುವುದು. ಉರುವಲು, ಮೇವು, ಗೊಬ್ಬರ, ಸಣ್ಣ ನಾಟಾ ಉತ್ಪಾದಿಸಬಲ್ಲ ೨೦ಕೋಟಿ ಸಸಿಗಳನ್ನು ಎರಡು ಲಕ್ಷ ಹೆಕ್ಟೇರ್ ಕೃಷಿಭೂಮಿಗೆ ಕೃಷಿಕರು ನೆಡಬೇಕಾಗಿದೆ.

ಯೋಜನೆಯ ಒಟ್ಟು ಹಣದಲ್ಲಿ ಅರಣ್ಯೀಕರಣಕ್ಕಾಗಿ ೩೬೨.೯೧೪ ಕೋಟಿ (೬೪.೦೬) ಖರ್ಚಾಗುವದು. ಕಟ್ಟಡಕ್ಕಾಗಿ ೬೪.೧೪೪ ಕೋಟಿ (೧೧.೩೦) ವೇತನಕ್ಕಾಗಿ ೬೦.೧೪೬ ಕೋಟಿ (೧೦.೬೨) ಖರ್ಚಾಗುವುದಾಗಿ ಇಲಾಖೆ ಹೇಳಿಕೊಂಡಿದೆ. ಸಾಧನ ಸಲಕರಣೆ, ಪಿಠೋಪಕರಣ ದುರಸ್ತಿ, ನಿರ್ವಹಣಾ ವೆಚ್ಚ, ತರಬೇತಿ, ಸಂಶೋಧನೆ, ವಾಹನಗಳಿಗಾಗಿ ಯೋಜನೆಯ ಇನ್ನುಳಿದ ಹಣ ಖರ್ಚಾಗಲಿದೆ. ಒಟ್ಟು ೪೦೬೮ ಜನ ಸಿಬ್ಬಂದಿಗಳು ಈ ಯೋಜನೆಯಲ್ಲಿ ಕಾರ್ಯನಿರ್ವಹಿಸಲಿದ್ದಾರೆ. ಇವರಲ್ಲಿ ೭೬೩ಜನರನ್ನು ಹೊಸದಾಗಿ ಸೇರಿಸಿಕೊಳ್ಳಲಾಗುತ್ತಿದೆ. ಯೋಜನೆಗಾಗಿ ದೇಶೀಯ ಹಾಗೂ ವಿದೇಶಿ ತರಬೇತಿಯನ್ನು ಆಯೋಜಿಸಲಾಗಿದೆ. ೧೮.೦೪೮ ಜನ ದೇಶೀಯ ಹಾಗೂ ವಿದೇಶಿ ತರಬೇತಿಗಳಲ್ಲಿ ಪಾಲ್ಗೊಳ್ಳಲಿದ್ದು ಇದಕ್ಕಾಗಿ ೨೨.೧೭೦ ಕೋಟಿ ರೂಪಾಯಿ ಖರ್ಚಾಗಲಿದೆ. ಕೇವಲ ೧೬೭ ಜನ ನೌಕರರಿಗೆ ನೀಡಲಿರುವ ವಿದೇಶಿ ತರಬೇತಿಗಳಿಗಾಗಿ ೧೨.೮೧೨ ಕೋಟಿ ರೂಪಾಯಿ ಖರ್ಚಾಗಲಿದೆ. ಕಂಪ್ಯೂಟರೀಕರಣ, ವೀಕ್ಷಣಾ ಗೋಪುರಗಳ ನಿರ್ಮಾಣ. ಬೀಜ ಹಾಗೂ ಮಣ್ಣು ಪರೀಕ್ಷೆಗಳಿಗಾಗಿ ಪ್ರಯೋಗಾಲಯಗಳು, ಬೀಜ ಸಂಗ್ರಹಕ್ಕಾಗಿ ಶೈತ್ಯಾಗಾರಗಳು ನಿರ್ಮಾಣವಾಗಲಿವೆ.

ಇಡೀ ಯೋಜನೆಯ ಪ್ರಧಾನ ಕ್ಷೇತ್ರ ಕೃಷಿ ಭೂಮಿಯಾಗಿದ್ದು ೩ಲಕ್ಷ ಹೆಕ್ಟೇರ್ ಕೃಷಿ ಭೂಮಿಯಲ್ಲಿ ೨೧ ಕೋಟಿ ಸಸಿ ಬೆಳೆಸುವುದಾಗಿ ಯೋಜನೆ ಹೇಳಿದೆ. ಆದರೆ ಕೃಷಿಕರು ಹೊಲದಲ್ಲಿ ಗಿಡ ಬೆಳೆಸಲು ಸಿದ್ಧರಾಗಿದ್ದಾರೆಯೇ? ಎಂಬ ಮೂಲ ಪ್ರಶ್ನೆಯನ್ನು ಕೃಷಿಕರಲ್ಲಿ ಕೇಳಲಾಗಿಲ್ಲ. ಗಿಡ ಬೆಳೆಸುವಲ್ಲಿನ ಸಮಸ್ಯೆಗಳೇನು ಎಂಬುದರ ವಿಶ್ಲೇಷಣೆ ನಡೆದಿಲ್ಲ. ಇಂತಹ ಸ್ಥಿತಿಯಲ್ಲಿ ಸಾಲದ ಹಣವಂತೂ ಹರಿದು ಬಂದಿದೆ. ಯೋಜನೆ ಜನಪರವಾಗಲು ಈಗಲಾದರೂ ತಾವು ಚಿಂತಿಸಬೇಕಾಗಿದೆ ಎಂದು ಶಿವಾನಂದ ಕಳವೆ ನುಡಿದರು.

••• ••• •••

# ಯೋಜನೆಯ-ಉದ್ದೇಶ ಎಷ್ಟರ ಮಟ್ಟಿಗೆ ಜನರ ಉದ್ದೇಶವಾಗಿದೆ?

- ಗುರುರಾಜ ಬುದ್ಯ

ಬಯಲುಸೀಮೆಯ ಅರಣ್ಯೀಕರಣ ಯೋಜನೆಯ ಮುಖ್ಯಾಂಶಗಳ ಬಗ್ಗೆ ಶಿವಾನಂದ ಕಳವೆ ವಿವರಿಸಿದ ನಂತರ ಫೆವಾರ್ಡ್ ಕೆ. ಈ ಯೋಜನೆಯ ಬಗ್ಗೆ ನಡೆಸಿದ ಪ್ರಯತ್ನಗಳ ಬಗ್ಗೆ ಬೆಂಗಳೂರಿನ ಗುರುರಾಜ ಬುದ್ಯ ಮಾತನಾಡಿದರು. 'ಇಡೀ ಯೋಜನೆಯ ಉದ್ದೇಶ ಎಷ್ಟರ ಮಟ್ಟಿಗೆ ಜನರ ಉದ್ದೇಶವಾಗಿದೆ?' ಎಂಬ ಸಂದೇಹ ಎತ್ತುತ್ತಲೇ ಇವರು ತಮ್ಮ ಮಾತು ಆರಂಭಿಸಿದರು. ಅರಣ್ಯ ಪ್ರದೇಶಗಳಲ್ಲಿ ಸಹಜವಾಗಿ ಕೆಲವು ಹುಲ್ಲುಗಾವಲುಗಳಿರುತ್ತವೆ. ಯೋಜನೆ ವ್ಯಾಪಕ ಅರಣ್ಯೀಕರಣ ಕೈಗೆತ್ತಿಕೊಂಡಾಗ ಅಲ್ಲಿನ ನೈಸರ್ಗಿಕ ಸಹಜ ಪರಿಸರಕ್ಕೆ ಔಷಧ ಮೂಲಿಕೆಗಳಿಗೆ ಧಕ್ಕೆಯಾಗುವ ಅಪಾಯವಿದೆ. ಕೃಷಿ ಭೂಮಿಯಲ್ಲಿ ಗಿಡ ನೆಡುವ ಗುರಿ ಹೊಂದಿದ ಇಲಾಖೆ ಬಡವರ ಭೂಮಿಯಲ್ಲಿ, ಶ್ರೀಮಂತರ ಭೂಮಿಯಲ್ಲಿ ಸಸಿ ನೆಡುವ ಪ್ರಮಾಣವೆಷ್ಟು? ಇದಕ್ಕೆ ಯಾವ ಮಾನದಂಡಗಳನ್ನೂ ಇಟ್ಟುಕೊಂಡಿಲ್ಲ ಎಂದರು. ಬಳ್ಳಾರಿಯ ಸಾವನ್‌ದುರ್ಗಾದಲ್ಲಿ ದೇವಸ್ಥಾನದ ಗೋಡೆ ಕಟ್ಟಲು ಅರಣ್ಯ ಇಲಾಖೆ ಈ ಯೋಜನೆಯ ಹಣ ಬಳಸುತ್ತಿದೆ. ಅಲ್ಲಿ ದನಕರು ಮೇಯುತ್ತಿದ್ದ ಪ್ರದೇಶಕ್ಕೆ ಈಗ ಇಲಾಖೆ ಗೋಡೆ ಕಟ್ಟಿ ದನಕರುಗಳ ಮೇವಿನ ಸಮಸ್ಯೆ ಸೃಷ್ಟಿಸಿದೆ ಎಂದರು. ಇಲಾಖೆ ಹೊಸ ಹೊಸ ಜಾತಿಯ ಸಸ್ಯಗಳನ್ನು ತಂದು ವ್ಯಾಪಕ ಪ್ರಮಾಣದಲ್ಲಿ ಬೆಳೆಸುವುದರಿಂದ ಇಲ್ಲಿನ ಪರಿಸರಕ್ಕೆ ಯಾವ ರೀತಿಯ ಪರಿಣಾಮವಾಗಬಹುದು ಎಂಬ ಬಗ್ಗೆ ವೈಜ್ಞಾನಿಕ ಮಾಹಿತಿಗಳು ಇಲಾಖೆಯಲ್ಲಿಲ್ಲ ಎಂದರು.

ಇತ್ತೀಚಿಗೆ ಬೆಂಗಳೂರಿಗೆ ಜಪಾನ್ ತಂಡ ಭೇಟಿ ನೀಡಿದಾಗ ನಾವು ಫೆವಾರ್ಡ್ ಕೆ. ಪ್ರತಿನಿಧಿಗಳಾಗಿ ಅಲ್ಲಿ ಹಾಜರಿದ್ದೆವು. ಯೋಜನೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರದ ಬಗ್ಗೆ ಚರ್ಚಿಸಿದೆವು. ಆ ಸಂದರ್ಭದಲ್ಲಿ ಜಪಾನ್ ಪ್ರತಿನಿಧಿಗಳು ಯೋಜನೆ ಕಾರ್ಯಗತವಾಗುವ ಪ್ರತಿ ಜಿಲ್ಲೆಗಳಿಂದ ಎರಡು ಸ್ವಯಂ ಸೇವಾ ಸಂಸ್ಥೆಗಳ ಹೆಸರನ್ನು ನೀಡಲು ನಮಗೆ ತಿಳಿಸಿದರು. ಹಾಗೇ ನಾವು ಹೆಸರಿಸಿದ ಸ್ವಯಂ ಸೇವಾ ಸಂಸ್ಥೆಗಳ ಸಹಕಾರವನ್ನು ಆಯಾ ಜಿಲ್ಲೆಗಳಲ್ಲಿ ಬಳಸಲಾಗುವುದು ಎಂದಿದ್ದಾರೆ. ಈ ವಿಚಾರದ ಬಗ್ಗೆ ನಮ್ಮ ಫೆವಾರ್ಡ್ ಕೆ. ಸಭೆಯಲ್ಲಿ ಚರ್ಚಿಸಿ ಸರ್ವಾನುಮತದ ತೀರ್ಮಾನದ ಆಧಾರದ ಮೇಲೆ ಮುಂದಿನ ಹೆಜ್ಜೆಯಿಡಬೇಕಾಗಿದೆ. ಇಲ್ಲಿ ನನ್ನ ವೈಯಕ್ತಿಕ ಅಭಿಪ್ರಾಯದ ಪ್ರಕಾರ ನಾವು ಜಪಾನಿಗೆ ಕರ್ನಾಟಕ ಸರಕಾರ ಕಳಿಸುವ ವರದಿಯಲ್ಲಿ ಯಾವ ಯಾವ ಅಂಶಗಳಿರಬೇಕು ಎಂಬುದನ್ನು ದಾನಿ ಸಂಸ್ಥೆಗೆ ತಿಳಿಸುವುದು ಒಳ್ಳೆಯದು ಎಂದರು.

ನಾವು ಯೋಜನೆ ಬಂದ ವರ್ಷದ ನಂತರ ಈಗ ತುಂಬಾ ತಡವಾಗಿ ಯೋಜನೆಯ ಬಗ್ಗೆ ಯೋಚಿಸುತ್ತಿದ್ದೇವೆ. ಈಗ ಪ್ರಥಮ ಹಂತದಲ್ಲಿ ನಾವು ಸ್ವಯಂ ಸೇವಾ ಸಂಸ್ಥೆಗಳು ಮಾತ್ರ ಸೇರಿ ಚರ್ಚಿಸುತ್ತಿದ್ದೇವೆ. ಇನ್ನು ನಾವು ಚುರುಕಾಗಬೇಕಿದೆ. ಕರ್ನಾಟಕ ಅರಣ್ಯ ಇಲಾಖೆಯ ಜೊತೆಗೂ ಈ ಯೋಜನೆಯ ಬಗ್ಗೆ ಜರೂರಾಗಿ ನಾವು ಚರ್ಚಿಸಬೇಕಾಗಿದೆ ಎಂದು ಬುದ್ಯ ಹೇಳಿದರು.

... ... ...

# ಕಾರ್ಯಗಾರದ ನಿರೀಕ್ಷೆಗಳ ಕ್ರೋಢೀಕರಣ

ಬಯಲುಸೀಮೆಯ ಅರಣ್ಯೀಕರಣ ಯೋಜನೆಯ ಆಗು ಹೋಗುಗಳ ಕುರಿತು ಚರ್ಚಿಸುವುದೇ ಕಾರ್ಯಾಗಾರದ ಮೂಲ ಉದ್ದೇಶವಾಗಿದ್ದರೂ ಈ ಚರ್ಚೆ ಹೆಚ್ಚು ಅರ್ಥಪೂರ್ಣವಾಗುವಂತಹ ಪ್ರಕ್ರಿಯೆಗಳ ಆರಂಭ ಈಗಾಗಿತ್ತು. ಸಂಪನ್ಮೂಲ ವ್ಯಕ್ತಿಗಳು ನೀಡಿದ ಮಾಹಿತಿಗಳು ಪೂರಕ ಪ್ರಶ್ನೋತ್ತರಗಳು ಮುಂಚಿತವಾಗಿ ಒದಗಿಸಿದ್ದ ಅರಣ್ಯ ಯೋಜನೆ ಕುರಿತ ಕನ್ನಡ ಅನುವಾದ ಪುಸ್ತಕಗಳು ಪ್ರತಿನಿಧಿಗಳಲ್ಲಿ ಪ್ರಶ್ನೆಗಳನ್ನು ಹುಟ್ಟಿಸಿದ್ದವು. ಯೋಜನೆ ಯಾಕೆ ಹೀಗೆ? ಏಕೆ ಈ ದೋಷಗಳಿವೆ? ಎಂಬಿತ್ಯಾದಿ ಸಮಸ್ಯೆ ವ್ಯಕ್ತವಾಗತೊಡಗಿತ್ತು. ಮಳಗಿಯ ವಿಕಾಸ ಸಂಸ್ಥೆಯ ಸುದರ್ಶನ್ ಪರಿಸರ ಸಂರಕ್ಷಣಾ ಕೇಂದ್ರದ ಪಾಂಡುರಂಗ ಹೆಗಡೆ, ಸಮಾಜ ಪರಿವರ್ತನ ಸಮುದಾಯದ ಎಸ್. ಆರ್. ಹಿರೇಮಠ, ಬೆಂಗಳೂರಿನ ಗುರುರಾಜ ಬುದ್ಯ, ಮಹೆಂದ್ರ ಕುಮಾರ್ ಮುಂತಾದವರೆಲ್ಲ ಸೇರಿ ಚರ್ಚೆಗೆ ಶಿಸ್ತಿನ ಸ್ವರೂಪ ನೀಡಲು ಮುಂದಾದರು.

ಯೋಜನೆ ವಿವರಗಳು ನಿಮ್ಮ ಕೈಯಲ್ಲಿವೆ. ಇದಕ್ಕೆ ಸಂಬಂಧಿಸಿದಂತೆ ಅರಣ್ಯ ಇಲಾಖೆ, ಸರಕಾರಕ್ಕೆ ಸಂಬಂಧಿಸಿದಂತೆ ಕೇಳಬೇಕಾದ ಪ್ರಶ್ನೆಗಳನ್ನು ಒಬ್ಬೊಬ್ಬರಾಗಿ ಕೇಳಲು ಪ್ರತಿನಿಧಿಗಳಿಗೆ ತಿಳಿಸಲಾಯಿತು. ಈ ಪ್ರಶ್ನೆಗಳು ಫವಾರ್ಡ್ ಕೆ. ಗೆ ಸಂಬಂಧಪಟ್ಟವಾಗಿದ್ದರೂ ಕೇಳಿ. ಅರಣ್ಯ ನೀತಿಗೆ ಸಂಬಂಧಿಸಿದ ಪ್ರಶ್ನೆಗಳನ್ನಾದರೂ ಇರಲಿ ಒಟ್ಟಿನಲ್ಲಿ ಯೋಜನೆಯ ಬಗ್ಗೆ ನಿರೀಕ್ಷೆಗಳು ಯಾವವು ಎಂಬುದನ್ನು ಸಂಗ್ರಹಿಸುವ ಕಾರ್ಯ ಆರಂಭವಾಯಿತು. ಸುಮಾರು ಅರವತ್ತಕ್ಕೂ ಹೆಚ್ಚು ಪ್ರತಿನಿಧಿಗಳು ಉತ್ಸಾಹದಿಂದ ತಮ್ಮ ಅಭಿಪ್ರಾಯಗಳನ್ನು ಸಭೆಯ ಮುಂದಿಡತೊಡಗಿದರು. ಸುಮಾರು ಒಂದು ತಾಸಿಗೂ ಹೆಚ್ಚು ಕಾಲ ಈ ಅಭಿಪ್ರಾಯ ಸಂಗ್ರಹ ಕಾರ್ಯ ನಡೆಯಿತು.

ಬಳ್ಳಾರಿಯ ಸಾವನ್‌ದುರ್ಗದಲ್ಲಿ ಗೋಡೆ ಕಟ್ಟಲು ಹಣ ಖರ್ಚಾದ ಪ್ರಸ್ತಾಪ ಉಪನ್ಯಾಸಕಾರರ ಮಾತಿನಲ್ಲಿಈ ಹಿಂದೆಯೇ ವ್ಯಕ್ತವಾಗಿತ್ತು. ಇಲ್ಲೂ ಕೂಡಾ ಇದೇ ಪ್ರಶ್ನೆ ಐತಿಹಾಸಿಕ ಪ್ರದೇಶದಲ್ಲಿ ಯೋಜನೆಯ ಆದ್ಯತೆ ಯಾವುದಕ್ಕೆ? ಇದು ಸ್ಪಷ್ಟಗೊಳ್ಳಬೇಕೆಂಬ ಕಳಕಳಿ. ೪೦ಕೋಟಿ ರೂಪಾಯಿ ಆಗಲೇ ಖರ್ಚಾಗಿದೆಯೇ! ನಮಗೆ ಈಗ ಯೋಜನೆಯ ಬಗ್ಗೆ ಗೊತ್ತಾಗುತ್ತಿದೆ. ಹಣ ಯಾವುದಕ್ಕೆ ಖರ್ಚಾಯಿತು? ಅರಣ್ಯ ಇಲಾಖೆಯ ಕಾರ್ಯವೈಖರಿಯನ್ನು ಸಂಶಯದಿಂದ ಪ್ರಶ್ನಿಸಿದರು. ಯೋಜನೆಯ ಬಗ್ಗೆ ಜನತೆಗೆ ಅರಿವಿಲ್ಲ. ಅಧಿಕಾರವೂ ಇಲ್ಲ. ಇಲ್ಲಿ ನಾವು ಗುಲಾಮರು ಮಾತ್ರ. ಸಹಜ ಆಕ್ರೋಶಗಳೂ ವ್ಯಕ್ತವಾದವು.

ಜಪಾನ್ ದೇಶ ಹೇಗೆ ಇಷ್ಟೊಂದು ಹಣವನ್ನು ಸಾಲವಾಗಿ ನೀಡುತ್ತಿದೆ? ಈ ಸಾಲಕ್ಕೆ ಖಾಸಗಿ ಕೃಷಿ ಭೂಮಿಯ ಒಡೆಯರೂ ಜವಾಬ್ದಾರರಾಗುತ್ತಾರೇನು? ಆ ಮಾತಿನಲ್ಲಿ ಆತಂಕ ತುಂಬಿದ್ದವು. ಗ್ರಾಮ ಅರಣ್ಯ ಸಮಿತಿ ರಚನೆಯಾಗುವಾಗ ಜನರೇ ಸಮಿತಿಯ ಕಾರ್ಯದರ್ಶಿಯಾಗಬೇಕು. ಒತ್ತುವರಿ ಭೂಮಿಯಲ್ಲಿ ಗಿಡ ನೆಡಲು ಇಲಾಖೆ ಮುಂದಾದರೆ ಬಡವರು ಅತಂತ್ರರಾಗಬಹುದು. ಖಾಸಗಿ ಭೂಮಿಗಳಲ್ಲಿ ೩ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಸಸಿ ನೆಡುವುದಾಗಿ ಹೇಳುವ ಯೋಜನೆ 'ಖಾಸಗಿ ಭೂಮಿ'ಯನ್ನು ಅರಣ್ಯೀಕರಣಕ್ಕೆ ಒಳಪಡಿಸುವಾಗ ಯಾವ ಮಾನದಂಡದಿಂದ ಆಯ್ದುಕೊಳ್ಳುತ್ತದೆ? ಅಂತಿಮ ಉತ್ಪನ್ನದಲ್ಲಿ ಪಾಲು ಸಿಗುವದು ನಿಜವೆ? ಪ್ರತಿನಿಧಿಗಳು ಒಂದಾದ ಮೇಲೆ ಒಂದರಂತೆ ಪ್ರಶ್ನೆಗಳನ್ನು ಹಾಕುತ್ತ ಹೋದರು. ಕೆಲವರು ಸಾಲದ ಮರು ಪಾವತಿಯ ಬಗ್ಗೆ, ಮಹಿಳೆಯರ ಭಾಗವಹಿಸುವಿಕೆಯ ಬಗ್ಗೆ, ಅರಣ್ಯೀಕರಣಕ್ಕೆ ಆಯ್ದುಕೊಂಡ ಸಸ್ಯಜಾತಿ, ಪರಿಣಾಮಗಳ ಬಗ್ಗೆ ಅಭಿಪ್ರಾಯ ಮಂಡಿಸಿದರು. ಇದೇ ಬಯಲುಸೀಮೆಯಲ್ಲಿ ಹಣವಿಲ್ಲದೇ ಕೇವಲ ಸಾಂಪ್ರದಾಯಿಕ ಜ್ಞಾನದಿಂದ ಕಾಡು ಬೆಳೆಸಲಾಗಿದೆ. ಇಲಾಖೆ ಇಂತಹ ಹಳ್ಳಿಗರಿಂದ ಸ್ಫೂರ್ತಿ ಪಡೆಯಬಹುದಲ್ಲ ಎಂಬ ಸಲಹೆಗಳು ಮಂಡಿಸಲ್ಪಟ್ಟವು. ಸಂಶೋಧನೆ, ತರಬೇತಿ ಯೋಜನೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ, ಗ್ರಾಮ ಪಂಚಾಯತಿಯ ಪಾತ್ರಗಳ ಬಗೆಗೂ ತಿಳಿದುಕೊಳ್ಳುವ ಆಸಕ್ತಿ ಕೆಲವರದ್ದಾಗಿದ್ದರೆ ಮತ್ತೆ ಕೆಲವರು 'ಹೀಗೆ ಇರಬೇಕು' ಎಂಬ ನೀತಿ ನಿರೂಪಣೆಯನ್ನು ಕೂಡಾ ತಿಳಿಸಿದರು. ಪ್ರತಿನಿಧಿಗಳೆಲ್ಲ ಆಸಕ್ತಿಯಿಂದ ಈ ಕಾರ್ಯದಲ್ಲಿ ಭಾಗಿಯಾಗಿ ಅಭಿಪ್ರಾಯ ಮಂಡಿಸುತ್ತಿದ್ದರೆ ಅಂತಹ ವಿಚಾರಗಳನ್ನು ತಟ್ಟನೆ ಸ್ವೀಕರಿಸಿ ಸಂಕ್ಷಿಪ್ತವಾಗಿ ದಾಖಲಿಸುವ ಕ್ರಿಯೆಯಲ್ಲಿ ಹಿರೇಮಠರ ಸಹಕಾರದೊಂದಿಗೆ ಸುದರ್ಶನ್ ಕಾರ್ಯಮಗ್ನರಾಗಿದ್ದರು. ಈ ಅಭಿಪ್ರಾಯ ಸಂಗ್ರಹಣಾ ಕಾರ್ಯ ಮುಗಿದಾಗ ಅರವತ್ತಕ್ಕೂ ಹೆಚ್ಚು ವಿವಿಧ ವಿಷಯಗಳಿಗೆ ಸಂಬಂಧಿಸಿದ ಪಟ್ಟಿ ಸಿದ್ಧವಾಗಿತ್ತು.

••• ••• •••

# ಸಂಗ್ರಹಿತ ನಿರೀಕ್ಷೆಗಳ ಪರಿಷ್ಕರಣೆ

ಯೋಜನೆಯ ನಿರೀಕ್ಷೆಗಳ ಕ್ರೋಢೀಕರಣವಾದಾಗ ಸಂಖ್ಯೆ ಅರವತ್ತಕ್ಕೆ ದಾಟಿದ್ದರೂ ಅವುಗಳೆಲ್ಲ ಕೇವಲ ಕೆಲವೇ ಪ್ರಮುಖ ವಿಷಯಗಳಡಿಯಲ್ಲಿ ಚರ್ಚಿಸಬಹುದಾದದ್ದು. ಈ ಹಿನ್ನೆಲೆಯಲ್ಲಿ ಸಂಗ್ರಹಿತ ನಿರೀಕ್ಷೆಗಳನ್ನು ೮-೧೦ ವಿಷಯಗಳಡಿಯಲ್ಲಿ ಆಳವಾಗಿ ಚರ್ಚಿಸಬೇಕಿತ್ತು. ಯೋಜನೆ ಅಳವಡಿಸಿಕೊಂಡ ರೀತಿಯ ಬಗೆಗೆ, ಯೋಜನೆಯಲ್ಲಿ ಅರಣ್ಯ ಇಲಾಖೆ, ಜನರ ಸ್ವಯಂ ಸೇವಾ ಸಂಸ್ಥೆಗಳ ಪಾತ್ರದ ಬಗೆಗೆ ಸಂಬಂಧಿಸಿದ ವಿಷಯಗಳು. ಸಾಲದ ಮರುಪಾವತಿ, ಒತ್ತುವರಿ, ಖಾಸಗಿ ಭೂಮಿಯಲ್ಲಿ ಅರಣ್ಯೀಕರಣದ ನಂತರದಲ್ಲಿ ಆ ಕಾರ್ಯದ ಪರಿಶೀಲನೆ (ಅನುಸರಣೆ) ಮಾಡುವದು. ಮಹಿಳೆಯರು, ಭೂರಹಿತರ ಭಾಗವಹಿಸುವಿಕೆ, ಹಣಕಾಸಿನ ನಿರ್ವಹಣೆಯಲ್ಲಿ ಪಾರದರ್ಶಕತೆಯ ಬಗೆಗೆ ಚರ್ಚಿಸುವ ನಿರ್ಧಾರಕ್ಕೆ ಬರಲಾಯಿತು.

ಚರ್ಚೆಗೆ ಅನುಕೂಲವಾಗುವಂತೆ ೮-೧೦ ಜನ ಸದಸ್ಯರನ್ನೊಳಗೊಂಡ ೫ ಗುಂಪುಗಳನ್ನು ರಚಿಸಲಾಯಿತು. ಪ್ರತಿ ಗುಂಪಿನಲ್ಲೂ ಓರ್ವರು ಚರ್ಚೆಯ ಫಲಶ್ರುತಿಗಳನ್ನು ದಾಖಲಿಸಬೇಕು. ಮುಂದಿನ ೪೦ ನಿಮಿಷಗಳೊಳಗಾಗಿ ಪ್ರತಿ ಗುಂಪಿನವರೂ ತಮ್ಮ ಗುಂಪು ಚರ್ಚೆಯ ಫಲಿತಾಂಶಗಳನ್ನು ಸಭೆಯ ಮುಂದಿಡಲು ಸೂಚಿಸಲಾಯಿತು. ಈ ಪ್ರಕಾರವಾಗಿ ಐದು ಗುಂಪುಗಳೂ ನಿರೀಕ್ಷೆಗಳ ಪರಿಷ್ಕರಣೆಯಿಂದ ತಯಾರಿಸಿದ ಹತ್ತು ವಿಷಯಗಳಿಗೆ ಸಂಬಂಧಿಸಿ ಚರ್ಚೆಯಲ್ಲಿ ತೊಡಗಿದವು.

••• ••• •••

# ಗುಂಪು ಚರ್ಚೆಯ ಫಲಶೃತಿ

ಗುಂಪು ಚರ್ಚೆ ಮುಗಿದು ಮತ್ತೆ ಪ್ರತಿನಿಧಿಗಳೆಲ್ಲ ಸುತ್ತ ಸೇರಿದರು. ಪ್ರತಿ ಗುಂಪಿನ ಪ್ರಮುಖರೂ ತಮ್ಮ ಚರ್ಚೆಯ ಸಾರಾಂಶಗಳನ್ನು ಸಭೆಯೆದುರು ಇಡತೊಡಗಿದರು. ವಿವಿಧ ಪ್ರದೇಶ, ವಿಭಿನ್ನ ಜನ ಜೀವನದ ಕ್ಷೇತ್ರಾನುಭವವಿದ್ದ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಈ ಚರ್ಚೆಯಲ್ಲಿ ವ್ಯಕ್ತ ಪಡಿಸಿದ ವಿಚಾರಗಳಿಂದ ಇಡೀ ಯೋಜನೆಯ ಎಲ್ಲ ಆಯಾಮಗಳನ್ನು ವಿಮರ್ಶೆಗಿಕ್ಕಿದಂತಾಗಿತ್ತು. ಇಂತಹ ಗುಂಪು ಚರ್ಚೆಯ ಮೂಲ ಉದ್ದೇಶವೇ ಇದಾಗಿದ್ದರಿಂದ ಚರ್ಚೆಗೆ ವಿಷಯದ ಆಳವೂ ಬೆಳೆದಿತ್ತು. ಪ್ರಮುಖ ಹತ್ತು ವಿಷಯಗಳಿಗೆ ಸಂಬಂಧಿಸಿದಂತೆ ಐದು ಗುಂಪುಗಳು ವ್ಯಕ್ತಪಡಿಸಿದ ಸಂಗತಿಗಳ ಕ್ರೋಡೀಕರಣ ಹೀಗಿದೆ.

### ೧) ರಾಷ್ಟ್ರೀಯ ಅರಣ್ಯ ನೀತಿ ಹಾಗೂ ಯೋಜನೆ ಅಳವಡಿಸಿಕೊಂಡಂತಹ ರೀತಿ.

ಯೋಜನೆ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಯೋಜಿಸಲಾಗಿದೆ. ಜಂಟಿ ಅರಣ್ಯ ಯೋಜನೆ (ಪಶ್ಚಿಮಘಟ್ಟ ಅರಣ್ಯಾಭಿವೃದ್ಧಿ)ಯಲ್ಲಿ ಜನರ ಸಹಭಾಗಿತ್ವವಿದ್ದರೂ ಈ ಬಯಲುಸೀಮೆಯ ಯೋಜನೆಯಲ್ಲಿ ಇದಕ್ಕೆ ಅವಕಾಶವಿಲ್ಲ. ಯೋಜನೆಯ ಬಗೆಗೆ ಪರಿಪಕ್ವವಾದ ಮಾರ್ಗದರ್ಶಿ ಸೂತ್ರಗಳ ಕೈಪಿಡಿ ಬೇಕಾಗಿದೆ. ಸ್ಥಳೀಯ ಸಂಘಸಂಸ್ಥೆಗಳಿಗೆ, ಜನರಿಗೆ ಯೋಜನೆಯ ರೂಪು ರೇಷೆಗಳ ಬಗೆಗೆ ತಿಳುವಳಿಕೆ ನೀಡಬೇಕೆಂಬ ಅಭಿಪ್ರಾಯಗಳು ವಿವಿಧ ಗುಂಪುಗಳಿಂದ ವ್ಯಕ್ತವಾದವು. ಸ್ಥಳೀಯ ಜನರ ಸಹಭಾಗಿತ್ವದಲ್ಲಿ ಯೋಜನೆ ಅನುಷ್ಠಾನಗೊಳ್ಳಬೇಕು. ಜನರ ಬೇಡಿಕೆಯಂತೆ ಕ್ರಿಯಾ ಯೋಜನೆ ರೂಪುಗೊಳ್ಳಬೇಕು. ಅರಣ್ಯ ಅಭಿವೃದ್ಧಿಗಾಗಿ ಪ್ರದೇಶಗಳ ವಿಂಗಡನೆ ಮಾಡಿ ಜನರ ಸಹಭಾಗಿತ್ವ ನಿಗದಿಪಡಿಸಬಾರದು. ಅರಣ್ಯೀಕರಣದ ಎಲ್ಲ ಕ್ಷೇತ್ರಗಳಲ್ಲೂ ಜನರ ಸಹಭಾಗಿತ್ವವಿರಬೇಕು. ಸ್ಥಳೀಯ ಪರಿಸರಕ್ಕೆ ಬೇಕಾದ ಗಿಡ ಬೆಳಸಬೇಕು ಮಾನವ ಶ್ರಮದಿಂದ ಸಸಿ ನೆಡಬೇಕೆ ವಿನಹ ಯಂತ್ರಗಳ ಸಹಾಯದಿಂದಲ್ಲ. ವಿದೇಶದಿಂದ ಅರಣ್ಯೀಕರಣಕ್ಕಾಗಿ ಸಾಲ ತಂದು ಅನುತ್ಪಾದಕ ಸಂಗತಿಗಳ ಬಗ್ಗೆ ಖರ್ಚುಮಾಡಬಾರದು. ರಚನೆಯಾಗುವ ಗ್ರಾಮ ಅರಣ್ಯ ಸಮಿತಿಗಳ ಕಾರ್ಯದರ್ಶಿ ಹಳ್ಳಿಗರೇ ಆಗಬೇಕು. ಗಿಡಗಳ ನರ್ಸರಿ ಮಾಡುವಲ್ಲಿ ಕೃಷಿಕರನ್ನು ತೊಡಗಿಸಿಕೊಳ್ಳಬೇಕು. ಮಹಿಳೆಯರನ್ನು, ಭೂರಹಿತರನ್ನು ಯೋಜನೆ ಅಲಕ್ಷ್ಯಿಸಿದೆ. ಸಾಂಪ್ರದಾಯಕವಾಗಿ ಸುಲಭದಲ್ಲಿ ಅರಣ್ಯ ಬೆಳೆಸುವ ವಿಚಾರ ಮಾಡದೇ ಕುಡಿವ ನೀರಿಲ್ಲದ ನೆಲದಲ್ಲಿ ನೀರಾವರಿಯಿಂದ ನೆಡುತೋಪು ಬೆಳೆಸುವ ದುಂದುವೆಚ್ಚದ ಬಗ್ಗೆ ಟೀಕೆ ವ್ಯಕ್ತವಾದವು.

### ೨) ಅರಣ್ಯ ಇಲಾಖೆ

ಯೋಜನೆಯ ಖರ್ಚುವೆಚ್ಚದ ವಿವರಗಳು ಪಾರದರ್ಶಕವಾಗಿರಬೇಕು. ಗ್ರಾಮ ಪಂಚಾಯಿತಿ, ಸ್ಥಳೀಯ ಸ್ವಯಂ ಸೇವಾ ಸಂಸ್ಥೆ, ಇತರ ಸರ್ಕಾರಿ ಇಲಾಖೆಗಳಿಗೂ ಯೋಜನೆಯ ಬಗೆಗೆ ಸಮರ್ಪಕ ಮಾಹಿತಿ ನೀಡಬೇಕು. ಯೋಜನೆಯಲ್ಲಿ ಸಮುದಾಯದ ಭಾಗವಹಿಸುವಿಕೆ ಕಡ್ಡಾಯಗೊಳಿಸಬೇಕು. ಹಮ್ಮಿಕೊಳ್ಳುವ ಕಾರ್ಯಚಟುವಟಿಕೆಗಳು ಸಮಯಕ್ಕೆ ಅನುಗುಣವಾಗಿರುವುದರ ಜೊತೆಗೆ ತಾಂತ್ರಿಕ ಮಾಹಿತಿಗಳನ್ನು ನೀಡಬೇಕು. ಯೋಜನೆಯಲ್ಲಿ ಪರ್ಯಾಯ ಶಕ್ತಿ ಇಂಧನಗಳ ಬಳಕೆಗೆ ಒತ್ತು ನೀಡಬೇಕು. ಜಪಾನ್ ದೇಶ ಯಾವ ಉದ್ದೇಶಕ್ಕಾಗಿ ಹಣ ನೀಡುತ್ತಿದೆ ಎಂಬುದರ ಜೊತೆಗೆ ಹಣ ನಿರ್ವಹಣೆಯ ಬಗ್ಗೆ ಇರುವ ಒಪ್ಪಂದಗಳೂ ತಿಳಿಯಬೇಕು. ಸಾಂಸ್ಥಿಕ ಬದಲಾವಣೆ, ಯೋಜನೆ ಮತ್ತು ನೀತಿಯನ್ನು ರೂಢಿಸುವ ಸಮಯದಲ್ಲಿ ಸ್ವಯಂ ಸೇವಾ ಸಂಸ್ಥೆಗಳಿಗೂ ಜವಾಬ್ದಾರಿ ಇರಬೇಕು ಎಂಬುದನ್ನು ವಿವಿಧ ಗುಂಪುಗಳು ಪ್ರತಿಪಾದಿಸಿದವು.

### ೩) ಜನರ ಪಾತ್ರ

ಅರಣ್ಯದ ಮಹತ್ವ ಅರಿತುಕೊಂಡು ಅರಣ್ಯೀಕರಣ, ಅರಣ್ಯ ಸಂರಕ್ಷಣೆ ಕಾರ್ಯದಲ್ಲಿ ಜನತೆ ಭಾಗಿಯಾಗಬೇಕು. ಕಿರು ಅರಣ್ಯ ಉತ್ಪನ್ನಗಳನ್ನು ಅವಶ್ಯಕತೆಗೆ ಅನುಗುಣವಾಗಿ ಮಿತವಾಗಿ ಬಳಸಿಕೊಳ್ಳಬೇಕು. ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಅರಣ್ಯ ನಿರ್ವಹಣೆಗೆ ಮುಂದಾಗಿ ಯೋಜನೆಯ ಲಾಭ ಪಡೆದುಕೊಳ್ಳಬೇಕು. ಅವಶ್ಯವಿರುವ ಮಾಹಿತಿಯನ್ನು ಇಲಾಖೆಯಿಂದ ಪಡೆಯಬೇಕು. ಯೋಜನೆ ರೂಪಿಸುವಲ್ಲಿ ಯೋಜನೆಯ ಮೌಲ್ಯ ಮಾಪನ ಮಾಡುವಲ್ಲಿ ಕಡ್ಡಾಯವಾಗಿ ಜನರೆಲ್ಲ ಭಾಗವಹಿಸಬೇಕು.

### ೪) ಸ್ವಯಂ ಸೇವಾ ಸಂಸ್ಥೆ

ಅರಣ್ಯ ಇಲಾಖೆ ಹಾಗೂ ಜನರ ನಡುವೆ ಉತ್ತಮ ಬಾಂಧವ್ಯ ವೃದ್ಧಿಗಾಗಿ ಸ್ವಯಂ ಸೇವಾ ಸಂಸ್ಥೆಗಳು ಪ್ರಯತ್ನಿಸಬೇಕು. ತರಬೇತಿ, ನಿರ್ವಹಣಾ ಯೋಜನೆ ಹಾಗೂ ಒಟ್ಟಾರೆ ಯೋಜನೆಯ ಕಲ್ಪನೆಯನ್ನು ಜನರಿಗೆ ತಿಳಿಸುವುದು. ಅರಣ್ಯ ಸಮಿತಿ ರಚಿಸುವುದು, ಜನವಿರೋಧಿ ಅರಣ್ಯ ಕಾಯ್ದೆಗಳ ಬಗ್ಗೆ ಸಾಮಾಜಿಕ ಅರಿವು ಮೂಡಿಸುವುದು 'ಫೆವಾರ್ಡ್ ಕೆ.'ಯು ಸಾಧ್ಯವಾದಷ್ಟು ವಿಷಯಗಳನ್ನು ಸಂಗ್ರಹಿಸಿ ಎಲ್ಲ ಸ್ವಯಂ ಸೇವಾ ಸಂಸ್ಥೆಗಳಿಗೆ ತಿಳಿಸುತ್ತಿರಬೇಕು. ಸಂಸ್ಥೆಯ ಉದ್ದೇಶ, ಗುರಿಗೆ ತಕ್ಕಂತೆ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಜಂಟಿ ಅರಣ್ಯ ಯೋಜನೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ ನಿಗದಿಪಡಿಸಿದಂತೆ ಅದೇ ರೀತಿ ಇಲ್ಲಿಯೂ ಮುಂದುವರಿಯಬೇಕೆಂದು ಒಂದು ಗುಂಪು ಅಭಿಪ್ರಾಯ ಮಂಡಿಸಿತು. ಮತ್ತೊಂದು ಗುಂಪು ಈ ಯೋಜನೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರದ ಬಗ್ಗೆ ಸ್ಪಷ್ಟತೆ ಬೇಕು ಎಂದು ಕೋರಿತು.

### ೫) ಖಾಸಗಿ ಭೂಮಿ

ಖಾಸಗಿ ಭೂಮಿಯಲ್ಲಿ ಮೇವು, ಉರುವಲು, ಹಣ್ಣು ಹಂಪಲು ಗಿಡ ನೆಡುವ ಉದ್ದೇಶ ಒಳ್ಳೆಯದು. ಇದು ಬರೀ ಗಿಡ ನೆಡುವ ಕಾರ್ಯಕ್ರಮವಾಗದೇ ಮಣ್ಣು, ನೀರಿನ ಸಂರಕ್ಷಣೆಯ ಕಾರ್ಯವೂ ಇಲ್ಲಿ ನಡೆಯಬೇಕಾಗಿದೆ. ಗಿಡ ಬೆಳೆಸುವ

ಬಗ್ಗೆ ಸೂಕ್ತ ತರಬೇತಿ ಕೃಷಿಕರಿಗೆ ಬೇಕು. ಅಗತ್ಯವಿಲ್ಲದಿದ್ದರೂ ಸಸ್ಯಗಳ ವಿತರಣೆಯಾಗುವುದು ನಿಲ್ಲಬೇಕು. ಸಣ್ಣಪುಟ್ಟ ಕೃಷಿಭೂಮಿಯಲ್ಲಿ ಗಿಡನೆಟ್ಟರೆ ಕೃಷಿ ಬೆಳೆ ಹೇಗೆ? ಎಂಬ ಪ್ರಶ್ನೆ ವ್ಯಕ್ತವಾಯಿತು. ಕೃಷಿಕರು ಹೊಲದ ಬದುವಿಗೆ ಮಾತ್ರ ಗಿಡ ನೆಡಲು ಒಪ್ಪುತ್ತಾರೆ. ಕೃಷಿಭೂಮಿಯಲ್ಲಿ ಇಡೀಯಾಗಿ ಹಣ್ಣುಹಂಪಲಿನ ಗಿಡ ಬೆಳೆಸುವ (ಮಾದರಿ ೧೩ (೧೦)) ದಕ್ಕೆ ನೀರಿನ ಸಮಸ್ಯೆಯಿದೆ. ಇದಕ್ಕೆ ಪರ್ಯಾಯ ವ್ಯವಸ್ಥೆಯಾಗಬೇಕು ಎಂಬ ಅಭಿಪ್ರಾಯ ವ್ಯಕ್ತವಾಯಿತು.

**೬) ತರಬೇತಿ**

ವಿದೇಶಿ ತರಬೇತಿಗಾಗಿ ಯೋಜನೆಯಲ್ಲಿ ಭಾರೀ ಹಣ ಖರ್ಚಾಗುವುದು ಸರಿಯಲ್ಲ. ಈ ಹಿಂದಿನ ಯೋಜನೆಗಳಲ್ಲಿ ವಿದೇಶದಿಂದ ತರಬೇತಿ ಪಡೆದು ಬಂದವರಿಂದ ಏನು ಪ್ರಯೋಜನವಾಗಿದೆ? ೧೩೦ ವರ್ಷಗಳ ಅರಣ್ಯೀಕರಣದ ಇತಿಹಾಸದ ಈ ಕರ್ನಾಟಕದವರಿಗೆ ಯಾವ ವಿದೇಶಿ ತರಬೇತಿಯ ಅಗತ್ಯವೂ ಇಲ್ಲ. ಅರಣ್ಯಾಧಿಕಾರಿಗಳಿಗೆ, ಸಂಸ್ಥೆಗಳ ಪ್ರತಿನಿಧಿಗಳಿಗೆ, ಹಳ್ಳಿಗರಿಗೆ ನಿರ್ವಹಣಾ ಕೌಶಲ್ಯ, ನರ್ಸರಿ ಬೆಳೆಸುವುದು, ಮಣ್ಣು, ನೀರಿನ ಸಂರಕ್ಷಣೆ, ನಾಯಕತ್ವ, ಕಿರು ಅರಣ್ಯ ಉತ್ಪನ್ನಗಳ ಬಗ್ಗೆ ಸ್ಥಳೀಯ ತರಬೇತಿ ನೀಡಬೇಕು. ಸ್ಥಳೀಯ ಸಂಪನ್ಮೂಲ ತಂತ್ರಜ್ಞಾನ ಹೊಂದಿದ ಸ್ವಯಂ ಸೇವಾ ಸಂಸ್ಥೆಗಳಿಂದ ತರಬೇತಿ ನೀಡಬೇಕು.

**೭) ಸಾಲದ ಮರು ಪಾವತಿ**

ಸುಲಭ ಕಂತುಗಳಲ್ಲಿ ಕಡಿಮೆ ಬಡ್ಡಿದರದಲ್ಲಿ ಮರುಪಾವತಿ ಮಾಡುವ ವ್ಯವಸ್ಥೆ ಇರಬೇಕು. ಎಂದು ಒಂದು ಗುಂಪು ಹೇಳಿದರೆ ಮತ್ತೊಂದು ಗುಂಪು ಸಾಲ ಮರುಪಾವತಿ ಬಗ್ಗೆ ಜನರಿಗೆ ಸರಿಯಾಗಿ ತಿಳಿಸಿ. ಜವಾಬ್ದಾರಿ ಸ್ಪಷ್ಟಪಡಿಸಲು ಆಗ್ರಹಿಸಿತು. ಅರಣ್ಯ ಉತ್ಪನ್ನ ಬಂದ ನಂತರವೇ ಸಾಲ ಹಿಂದಿರುಗಿಸಬೇಕು. ಸಸಿ ಮಾರಾಟದಿಂದ ಬಂದ ಹಣವನ್ನು ಸಾಲ ಮರುಪಾವತಿಗೆ ಬಳಸಬೇಕು.

**೮) ಒತ್ತುವರಿ**

ಇಂತಹ ಭೂಮಿಗಳಲ್ಲಿ ಅರಣ್ಯೀಕರಣ ಮಾಡುವಾಗ ಬಡವರ ಭೂಮಿಯಲ್ಲಿ ಮಾತ್ರ ಮಾಡುವ ಅಪಾಯವಿದೆ. ಶ್ರೀಮಂತರ ಭೂಮಿಗಳನ್ನು ಇದರಿಂದ ಹೊರಗಿಡುವ ಪರಂಪರೆ ಇಲಾಖೆಯದು. ವಸ್ತುಸ್ಥಿತಿ ಹೀಗಿರುವುದರಿಂದ ಇಂತಹ ಒತ್ತುವರಿ ಭೂಮಿಗಳಲ್ಲಿ ಅರಣ್ಯೀಕರಣ ಮಾಡುವಾಗ ಗ್ರಾಮ ಅರಣ್ಯ ಸಮಿತಿಗಳೇ ಈ ಬಗ್ಗೆ ತೀರ್ಮಾನ ಕೈಗೊಳ್ಳಬೇಕು. ಅರಣ್ಯ ಇಲಾಖೆ ಏಕಪಕ್ಷೀಯವಾಗಿ ತೀರ್ಮಾನ ಕೈಗೊಳ್ಳಬಾರದು. ಭೂಮಿ ಮತ್ತೆ ಒತ್ತುವರಿಯಾಗದಂತೆ ನೋಡಿಕೊಳ್ಳಬೇಕು.

**೯) ಅನುಸರಣೆ**

ಅರಣ್ಯಾಭಿವೃದ್ಧಿಯ ಪರಿಶೀಲನೆಯನ್ನು (ಅನುಸರಣೆ) ನಿರಂತರವಾಗಿ ಅರಣ್ಯ ಇಲಾಖೆ ಹಾಗೂ ಜನ ಮಾಡುತ್ತಿರಬೇಕು. ಹಾಗೂ ಗಿಡ ಬೆಳೆಯುವಿಕೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಫಲಾನುಭವಿಗಳೂ ಈ ಬಗ್ಗೆ ಜವಾಬ್ದಾರಿ ಕೈಗೊಳ್ಳಬೇಕು.

**೧೦) ಮಹಿಳೆಯರ ಭಾಗವಹಿಸುವಿಕೆ**

ಯೋಜನೆ ರೂಪುರೇಷೆಯಲ್ಲಿ ಅರಣ್ಯೀಕರಣಕ್ಕೆ ಗಿಡ ಆಯ್ಕೆಯಲ್ಲಿ ಮಹಿಳೆಯರು ಭಾಗವಹಿಸಬೇಕು. ಇಂಧನ ಮೂಲಗಳ ಬಗ್ಗೆ ಮಹಿಳೆಯರಿಗೆ ತಿಳುವಳಿಕೆ ಹಾಗೂ ತರಬೇತಿ ನೀಡಬೇಕು. ಅರಣ್ಯಾಧರಿತ ಗೃಹಕೈಗಾರಿಕೆಗಳಲ್ಲಿ, ಕಿರು ಅರಣ್ಯ ಉತ್ಪನ್ನ ಸಂಗ್ರಹ ಸಂಸ್ಕರಣೆಗಳಲ್ಲಿ ಮಹಿಳೆಯರನ್ನು ತೊಡಗಿಸಿಕೊಳ್ಳಬೇಕು. ಶೇಕಡಾ ೫೦ರಷ್ಟು ಮಹಿಳೆಯರು ಎಲ್ಲಾ ಹಂತಗಳಲ್ಲೂ ಪಾಲ್ಗೊಳ್ಳಬೇಕು. ಗುಂಪುಗಳ ನಾಯಕತ್ವ ಮಹಿಳೆಯರಿಗೆ ಬೇಕು. ಮಹಿಳೆಯ ಹೆಸರಿನಲ್ಲಿರುವ ಪಟ್ಟಾ ಜಮೀನಿನಲ್ಲಿ ಈ ಯೋಜನೆ ಅಳವಡಿಸಬೇಕು. ಇಲಾಖೆಗಳಲ್ಲಿ ಕೂಡಾ ಮಹಿಳೆಯರಿರಬೇಕು.

**೧೧) ದಾನಿ ಸಂಸ್ಥೆಯ ಪಾತ್ರ (ಸಾಲ ನೀಡುವ ಸಂಸ್ಥೆ)**

ಸಾಲಕ್ಕಿಂತ ಅರಣ್ಯೀಕರಣಕ್ಕೆ ದಾನದ ಹಣ ಬಂದಿದ್ದರೆ ಒಳ್ಳೆಯದಿತ್ತೆಂಬ ಮಾತು ಕೇಳಿಬಂದಿತು. ಈ ಸಾಲ ನೀಡುವ ಸಂಸ್ಥೆಯ ಪಾತ್ರ ತುಂಬ ಸೂಕ್ಷ್ಮವಾದುದು. ಸ್ವಯಂ ಸೇವಾ ಸಂಸ್ಥೆ ಹಾಗೂ ಜನರ ಅಭಿಪ್ರಾಯಗಳನ್ನು ತೆಗೆದುಕೊಂಡು ಅದರಂತೆ ಅನುಷ್ಠಾನಗೊಳಿಸುವ ಅನುಕೂಲತೆ ಬೇಕು. ಸಾಮಾಜಿಕ ಅರಣ್ಯ ಯೋಜನೆ ಪಶ್ಚಿಮ ಘಟ್ಟ ಅರಣ್ಯ ಯೊಜನೆಯಲ್ಲಿನ ನೀತಿಗಳಲ್ಲಿನ ದೋಷಗಳ ಬಗ್ಗೆ ಅಧ್ಯಯನ ವರದಿಗಳು ಹೇಳಿವೆ. ದಾನಿ ಸಂಸ್ಥೆ ಈ ಸಂಗತಿಗಳನ್ನು ಗಮನಿಸಬೇಕು. ದೋಷಗಳ ಬದಲಾವಣೆಯಾದಂತೂ ಹಣ ನೀಡಬಾರದು. ಯೋಜನೆಯ ಸ್ವತಂತ್ರ ಅಧ್ಯಯನ ಸಮಿತಿಯನ್ನು ಈಗಲೇ ನೇಮಿಸಬೇಕು. ಯೋಜನೆಯ ಸಾಧ್ಯಾಸಾಧ್ಯತೆಯ ಪರಿಶೀಲನೆ ನಂತರ ಧನಸಹಾಯ ನೀಡಬೇಕು. ಯೋಜನೆ ಸಮರ್ಪಕವಾಗಿ ಅನುಷ್ಠಾನಗೊಳ್ಳುವಂತೆ ಉಸ್ತುವಾರಿ ಹಾಗೂ ಮೌಲ್ಯಮಾಪನ ನಡೆಯಬೇಕು ಎಂಬ ಅಭಿಪ್ರಾಯಗಳು ವ್ಯಕ್ತವಾದವು. ಸಾಲ ಸಂಸ್ಥೆ ಬಹುರಾಷ್ಟ್ರೀಯ ಸಂಸ್ಥೆಗಳ ಜಾಲದಂತೆ ಇಲ್ಲಿಗೆ ಕಾಲಿರಿಸಿದೆಯೇ? ಎಂಬ ಆತಂಕ ಕೂಡಾ ವ್ಯಕ್ತವಾಯಿತು.

**೧೨) ಗ್ರಾಮ ಪಂಚಾಯಿತಿಯ ಹಾಗೂ ಸ್ಥಳೀಯ ಸಂಸ್ಥೆಗಳ ಪಾತ್ರ**

ಗ್ರಾಮ ಪಂಚಾಯಿತಿಗೆ ಸಂಬಂಧಿಸಿದ ಭೂಮಿಯ ಜೊತೆ ಗ್ರಾಮ ಅರಣ್ಯ ಸಮಿತಿಗಳು ಪ್ರತ್ಯೇಕ ಕರಾರು ಪತ್ರ ಮಾಡಿಕೊಂಡು ಗಿಡ ಬೆಳೆಸಬೇಕು. ಸ್ವಯಂ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಇವುಗಳಿಗಿರಬೇಕು. ಅರಣ್ಯ ಸಮಿತಿಗಳು ಇಲಾಖೆಯ ವಿಸ್ತರಣೆಯಾಗುವುದನ್ನು ತಪ್ಪಿಸಬೇಕು. ಇವಕ್ಕೆ ಸ್ವಯಂ ಆಡಳಿತ ಬೇಕು.

**೧೩) ಪಾರದರ್ಶಕತೆ**

ಯೋಜನೆಯ ಎಲ್ಲ ಹಂತವೂ ಪಾರದರ್ಶಕವಾಗಿರಬೇಕು. ಜನರಿಗೆ ಯೋಜನೆಯ ಖರ್ಚು ವೆಚ್ಚ ನೋಡುವ ಅವಕಾಶ ಬೇಕು.

**೧೪) ಭೂರಹಿತರು**

ಸಾಮೂಹಿಕ ಭೂಮಿಯಲ್ಲಿ ಭೂರಹಿತರು ಸಸಿಗಳನ್ನು ಬೆಳೆಸಿ ನಿರ್ವಹಣೆ ಜವಾಬ್ದಾರಿ ಹೊರಬೇಕು. ನಿರಂತರ ಉದ್ಯೋಗ ಯೋಜನೆ ಅರಣ್ಯ ಉತ್ಪನ್ನದಲ್ಲಿ ಇವರಿಗೆ ಹೆಚ್ಚಿನ ಪ್ರಯೋಜನ, ನಿರುದ್ಯೋಗಿ ಭೂರಹಿತರನ್ನು ಗುರುತಿಸಿ ಕಾಮಗಾರಿಯಲ್ಲಿ ಕೆಲಸ ಕೊಡಬೇಕು.

# ಕಾಡು ಬೆಳಸಾಕ ಹಣಾ ಬೇಕೇನ್ರಿ!?

ಸಂಗಪ್ಪ ಉಪ್ಪಲದಿನ್ನಿ, ಕಲ್ಲಳ್ಳಿ
ಜಮಖಂಡಿ ತಾಲೂಕು, ಬಾಗಲಕೋಟೆ ಜಿಲ್ಲೆ

'ಬಯಲು ಸೀಮ್ಯಾಗ ಗಿಡಾಟಿ ಹಚ್ಚಾಕಂತ ಸರಕಾರದೋರು ೫೬೬ಕೋಟಿ ರೂಪಾಯಿ ಖರ್ಚು ಮಾಡ್ತಾ ಇದ್ದಾರ ಅಂತ ಸುದ್ದಿ ತಿಳೀತ್ರಿ. ನಾವು ಜಮಖಂಡಿ ತಾಲೂಕ ಕಲ್ಲಳ್ಳಿಯಿಂದ ಬಂದೇವ್ರಿ. ನೋಡ್ರಿ ಸರಟೆ ನಾವು ಒಂದು ರೂಪಾಯಿನೂ ಖರ್ಚು ಮಾಡದೇ ಕಾಡ್ ಬೆಳಸೇವ್ರಿ. ನಮ್ಮೀರ ಸನಿಹದಾಗ ಒಂದು ಸಾವಿರ ಎಕರೆ ಬೋಳುಗುಡ್ಡದಾಗ ೧೫ ವರ್ಷದಿಂದ ಊರಾನ ಮಂದಿ ಸೇರಿ ನಾವೇ ಸ್ವಂತ್ ರಕ್ಷಣಾಕೊಟ್ಟು ಗಿಡ ಬೆಳೆಸೇವ್ರಿ. ನಲವತ್ತು ಐವತ್ತು ಜಾತಿ ಗಿಡಗೊಳು ಹಕ್ಕಿ ಪಕ್ಷಿ ಪ್ರಾಣಿ ಗಂಜಲದಿಂದ ಬಂದು ಬಿದ್ ಹುಟ್ಯಾವ್ರಿ.'

ಕಾರ್ಯಗಾರದಲ್ಲಿ ಸೇರಿದ್ದ ವಿವಿಧ ಭಾಗಗಳ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳೆದುರು ಕಲ್ಲಳ್ಳಿಯ ಸಂಗಪ್ಪ ಮಾತು ಆರಂಭಿಸಿದಾಗಲೇ ಎಲ್ಲರಲ್ಲಿ ಸಹಜ ಕುತೂಹಲ ವ್ಯಕ್ತವಾಗಿತ್ತು. ಹಳ್ಳಿಯಲ್ಲಿ ಸೇರಿ ಕಾಡು ಬೆಳೆಸಲು ಕೈಗೊಂಡ ನಿರ್ಧಾರದಿಂದ ಈ ಹಳ್ಳಿಯ ಕಲ್ಲಿನ ನೆಲದಲ್ಲಿ ಕಾಡು ಅರಳಿದೆ. ಸಂಗಪ್ಪ ಈಗ ಇಲ್ಲಿನ ಅರಣ್ಯ ಸಮಿತಿಯ ಅಧ್ಯಕ್ಷರು. ಸಭೆಗೆ ನೀಡಿದ ಮಾಹಿತಿಯ ಪ್ರಕಾರ ಕಲ್ಲಳ್ಳಿಯಲ್ಲಿ ಈಗ ೮೦-೧೦೦ವರ್ಷಗಳ ಹಿಂದೆ ದಟ್ಟ ಕಾಡಿತ್ತು. ನಂತರ ಎಲ್ಲ ಕಡಿದು ಇದ್ದಲಿಗಾಗಿ ಸುಟ್ಟು ಖಾಲಿಯಾಗಿ ಬರಡು ನೆಲ ಬೆಳಯಿತು. ಮಳೆಯಾಗದೇ ಕೃಷಿ ಬೆಳೆಯೆಲ್ಲ ಹಾಳಾಗಿ ಹಳ್ಳಿಯ ಜನ ಊರು ಬಿಡುವಂತಹ ಸಂದರ್ಭ ಬಂದಿತು. ೧೫-೨೦ ವರ್ಷಗಳವರೆಗೂ ಭೂಮಿ ಬರಡಾಗಿ ಜನ ಸರಕಾರಕ್ಕೆ ತೀರ್ವೆ ಕೊಡಲಾಗದ ಸ್ಥಿತಿ ಬಂದಿತು. ಸರಕಾರ ಬರಗಾಲದ ಊರಾದ ಇದಕ್ಕೆ ಕರಮನ್ನಾ ಮಾಡಿತು. ಕಾಡಿದ್ದರೆ ಮಳೆ ಬರುವದೆಂದೂ ಕೃಷಿ ಬೆಳೆ ಚನ್ನಾಗಿ ಆಗುವುದೆಂದೂ ಹಳ್ಳಿಗರೆಲ್ಲ ಸೇರಿ ನಿರ್ಧರಿಸಿದರು. ಆ ಪ್ರಕಾರವಾಗಿ ಊರಿನ ೪೦೦೦ ಎಕರೆ ಅರಣ್ಯದ ಬರಡು ನೆಲದ ಪೈಕಿ ೧೦೦೦ ಎಕರೆ ಭಾಗದಲ್ಲಿ ಕಾಡು ಬೆಳೆಸುವ ನಿರ್ಧಾರ ಮಾಡಿದರು. ಊರಿನವರೇ ಶ್ರಮದಾನದ ಮೂಲಕ ಅರಣ್ಯಕ್ಕೆ ಕಲ್ಲಿನ ಬೇಲಿ ನಿರ್ಮಿಸಿದರು. ಯಾವೊಂದೂ ಗಿಡ ನೆಡದೇ ಕೇವಲ ಬೆಂಕಿ, ಅಕ್ರಮ ಕಟಾವಿನಿಂದ ಸಂರಕ್ಷಣೆ ಮಾಡುವುದರ ಮೂಲಕ ಅರಣ್ಯ ಈಗ ೧೫ವರ್ಷಗಳಲ್ಲಿ ದಟ್ಟವಾಗಿ ಬೆಳೆದಿದೆ. ಪ್ರಾರಂಭದಲ್ಲಿ ಜನರ ಸಹಕಾರ ಪಡೆಯುವುದು ಕಷ್ಟವಾಗಿತ್ತು. ನಂತರ ನಿಧಾನಕ್ಕೆ ಜನರಿಗೆ ತಿಳುವಳಿಕೆ ನೀಡಿ ಹಳ್ಳಿಯಲ್ಲಿ ಅರಣ್ಯ ರಕ್ಷಿಸುವಂತೆ ಡಂಗುರ ಸಾರುವುಧರ ಮುಖೇನ ಸಂರಕ್ಷಣೆ ಆರಂಭವಾಯಿತು. ಈಗ ಎರಡು ವರ್ಷದ ಹಿಂದೆ ಹಳ್ಳಿಗರು ಚನ್ನಾಗಿ ಕಾಡು ಬೆಳೆಸಿದ್ದನ್ನು ಕಂಡ ಅರಣ್ಯ ಇಲಾಖೆಯವರು ಇಲ್ಲೊಂದು ಗ್ರಾಮ ಅರಣ್ಯ ಸಮಿತಿ ರಚಿಸಿದ್ದಾರೆ. ಈ ಸಮಿತಿ ಆರಂಭವಾಗುವ ಮೊದಲೇ ಅರಣ್ಯ ಬೆಳೆಸಲಾಗಿತ್ತು. ಸಮಿತಿ ರಚನೆಯಿಂದ ಏನೂ ಪ್ರಯೋಜನವಾಗಲಿಲ್ಲ ಎನ್ನುವ ಸಂಗಪ್ಪ 'ನಮಗೆ ಕಾಡಿನಿಂದ ಬೇರಾವ ಉತ್ಪನ್ನ ಬೇಡ ಆದರೆ ಕಾಡು ಉಳಿದರೆ ಸಾಕು' ಎನ್ನುತ್ತಾರೆ. ಮುಂದಿನ ವರ್ಷ ಕಾಡಿನಲ್ಲಿ 'ಅಂಟಿ'ನ ಉತ್ಪನ್ನ ಆರಂಭವಾಗುವುದಾಗಿ ಸಂಗಪ್ಪ ಹೇಳಿದರು. ಈ ಉತ್ಪನ್ನ ಸರಕಾರಕ್ಕೆ ಸೇರಿದರೆ ನೀವೇನು ಮಾಡುತ್ತೀರಿ? ಎಂದು ಪ್ರತಿನಿಧಿಗಳು ಅವರನ್ನು ಪ್ರಶ್ನಿಸಿದಾಗ 'ಮಳೆಗಾಗಿ ನಾವು ಕಾಡು ಬೆಳೆಸಿದವರು ಉತ್ಪನ್ನಕ್ಕಾಗಿ ಅಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಹಳ್ಳಿಗರು ಬೆಳೆಸಿದ ಕಾಡಿನ ಬಗ್ಗೆ ಅಧ್ಯಯನ ನಡೆಸಿರುವ ಪರಿಸರ ಬರಹಗಾರ ಶಿವಾನಂದ ಕಳವೆ ಈ ಹಳ್ಳಿಯ ಬಗ್ಗೆ ಸಭೆಗೆ ಇನ್ನಷ್ಟು ಪೂರಕ ಮಾಹಿತಿ ನೀಡಿದರು. 'ಕಾಡಿಗೆ ಹೊಸ ಪಕ್ಷಿಗಳ ಆಗಮನವಾಗಿದೆ ಅವು ವಿವಿಧ ಜಾತಿಯ ಬೀಜ ತಂದು ಸಸ್ಯಾಭಿವೃಧ್ಧಿಯಲ್ಲಿ ತೊಡಗಿವೆ ಎಂದರು. ಬಯಲುಸೀಮೆಯ ಅರಣ್ಯೀಕರಣ ಯೋಜನೆಯಲ್ಲಿ ಅಧಿಕಾರಿಗಳು, ಸ್ವಯಂ ಸೇವಾ ಸಂಸ್ಥೆಗಳು ಈ ಹಳ್ಳಿಗರಿಂದ ಪಾಠ ಕಲಿಯಬೇಕಾಗಿದೆ. ಸಾಂಪ್ರದಾಯಿಕ ಜ್ಞಾನದಿಂದ ಅರಣ್ಯ ಬೆಳೆಸಿದ ಕರ್ನಾಟಕದ ಹಳ್ಳಿಗಳಲ್ಲಿ ಇದು ಪ್ರಮುಖವಾದ ಹಳ್ಳಿ ಎಂದರು. ೫೫ಲಕ್ಷ ರೂಪಾಯಿಗಳನ್ನು ಈಗಿನ ಅರಣ್ಯ ಯೋಜನೆ ವೀಕ್ಷಣಾ ಗೋಪುರ ನಿರ್ಮಾಣಕ್ಕಾಗಿ ಖರ್ಚುಮಾಡಲಿದೆ. ಆದರೆ ಕಲ್ಲಳ್ಳಿಯ ಹಳ್ಳಿಗರು ಅಲ್ಲಿಯ ಕಲ್ಲನ್ನು ಕಟ್ಟಿ ಈಗ ೧೨ವರ್ಷದ ಹಿಂದೆ ಸುಲಭದಲ್ಲಿ ಗೋಪುರ ನಿರ್ಮಿಸಿದ್ದಾರೆ ಎಂದರು.

## ಕಾರ್ಯ ಯೋಜನೆ

ಮುಂದಿನ ಆರು ತಿಂಗಳ ಅವಧಿ (ಮಾರ್ಚ್ ೯೮ ಆಗಸ್ಟ್ ೯೮)ಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ತಮ್ಮ ಜಿಲ್ಲೆಗಳಲ್ಲಿ ಮಾಡುವ ಕಾರ್ಯಕ್ರಮಗಳ ಬಗ್ಗೆ ಪರಸ್ಪರ ಚರ್ಚಿಸಿದರು. ಬಯಲುಸೀಮೆಯಲ್ಲಿ ಅರಣ್ಯ ಬೆಳೆಸುವ ಕುರಿತು ತಮ್ಮ ಜಿಲ್ಲಾಮಟ್ಟದಲ್ಲಿ ತಿಳುವಳಿಕೆ ನೀಡುವುದೇ ಗುರಿಯಾಗಿದ್ದ ಈ ಕಾರ್ಯ ಯೋಜನೆಯ ಉದ್ದೇಶ ಕಾರ್ಯಕ್ರಮದ ಸರಿಯಾದ ಅನುಷ್ಠಾನ ಹಾಗೂ ಜನರ ನೇರ ಸಹಭಾಗಿತ್ವದ ಕುರಿತಾಗಿದೆ.

ಜಿಲ್ಲಾ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟದ ಸಭೆಗಳಲ್ಲಿ ಯೋಜನೆಯ ಬಗ್ಗೆ ಚರ್ಚಿಸುವುದು, ಜನತೆಗೆ ಮಾಹಿತಿ. ತರಬೇತಿ ನೀಡುವುದು, ವಿವಿಧ ಸಮೂಹ ಮಾಧ್ಯಮಗಳಲ್ಲಿ ಈ ಬಗ್ಗೆ ಪ್ರಚಾರ ಮಾಡುವುದು, ಅರಣ್ಯ ಇಲಾಖೆ ಸಂಪರ್ಕಿಸಿ ಮಾಹಿತಿ ಪಡೆಯುವುದು ಅಧಿಕಾರಿಗಳೊಂದಿಗೆ ಚರ್ಚಿಸುವುದು, ಕರಪತ್ರಗಳನ್ನು ಮುದ್ರಿಸುವುದು, ಸ್ಥಳೀಯ ಮುಂದಾಳುಗಳು, ಜನ ಪ್ರತಿನಿಧಿಗಳಿಗೆ ಯೋಜನೆಯ ಬಗ್ಗೆ ತಿಳಿಸುವುದು. ಯೋಜನೆಯ ಬಗ್ಗೆ ಜನಾಭಿಪ್ರಾಯ ರೂಢಿಸುವುದು ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ನಿರ್ಧರಿಸಿದರು. ಜಿಲ್ಲಾಮಟ್ಟದಲ್ಲಿ ನಡೆಸುವ ಈ ಕಾರ್ಯಕ್ರಮಗಳ ವಿವರಗಳನ್ನು 'ಫೆವಾರ್ಡ್ ಕೆ.' ಗೆ ತಿಳಿಸುತ್ತ ನಿರಂತರ ಸಂಪರ್ಕ ಇರಿಸಿಕೊಳ್ಳುವುದಾಗಿ ತಿಳಿಸಿದರು.

(ವಿವರಗಳಿಗೆ ಅನುಬಂಧ ನೋಡಿ)

# ಕಾರ್ಯಗಾರದ ಠರಾವುಗಳು

೧. ಈ ಯೋಜನೆಯಲ್ಲಿ ರಾಷ್ಟ್ರೀಯ ಅರಣ್ಯ ನೀತಿಯನ್ನು ಪರಿಗಣಿಸದೆ ಜನರ ವಿಶ್ವಾಸವನ್ನು ತೆಗೆದುಕೊಳ್ಳದೆ ಮಹಿಳೆಯರ, ಭೂರಹಿತರ ಮತ್ತು ಸ್ವಯಂ ಸೇವಾ ಸಂಘಗಳ ಭಾಗವಹಿಸುವಿಕೆಯನ್ನು ನಿರ್ಲಕ್ಷಿಸಲಾಗಿದೆ.

೨. ೧೭ ಜಿಲ್ಲೆಗಳ ಪ್ರದೇಶ ವಿವಿಧ ಈ ಹವಾಮಾನ, ಮಣ್ಣು, ಸಸ್ಯ ಪ್ರಭೇಧ ಬೇರೆ ಬೇರೆಯಾಗಿದ್ದರೂ ಅಲಕ್ಷಿಸಿ ೧೩ ನಡುತೋಪುಗಳು ಮಾದರಿಗಳನ್ನು (ಪೂರ್ವ ಬಯಲು ಯೋಜನೆ ಸಾರಂಶದಲ್ಲಿ ಉಲ್ಲೇಖಿಸಿದಂತೆ) ತಯಾರಿಸಲಾಗಿದೆ. ರಾಷ್ಟ್ರೀಯ ಅರಣ್ಯ ನೀತಿಗೆ ವಿರುದ್ದವಾದ ೫ (ಜೋನ) ವಿಂಗಡಣೆ ಸೂಕ್ತವಾದುದಲ್ಲ. ಅದುದರಿಂದ ಅದನ್ನು ಸ್ಥಳೀಯ ಜನರ ಅಭಿಪ್ರಾಯದಂತೆ ಯೋಜನೆ ಜಾರಿಯಾಗಬೇಕು.

